# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:310 • ನೋಂದಣಿ ನಂ.:KARKAN27911 • ವಿಜಯನಗರ • 10.05.2024 • ಶುಕ್ರವಾರ • ಪುಟ:04 • ಬೆಲೆ:2

Volume:01 • Issue:310 • Reg.No:KARKAN27911 • VIJAYANAGARA • 10.05.2024 • Friday • Page:04 • Rs:2



House For Sale



3 BHK independent Duplex House with Built Area 2300 sq.ft. in an extent of 1500 sq.ft. for Sale at Rajeev Nagar, 2nd Cross, Hospet (adjacent KSSIDC Industrial Estate)

94409 86570

S.M.TRADERS & SERVICES

ATLAS COPCO

COMPRESSORS, HOSEPIPE, DRILL RODS,SPARE PARTS Etc.

Contact for Details

96866 63125
96866 63132
96864 13132

Hampi Road, Hosapete-583201




www.hampitimes.com


# ವಿಜಯನಗರಕ್ಕೆ ಕಲ್ಯಾಣ ಕರ್ನಾಟಕದಲ್ಲಿ ನಂ.1 ಪಟ್ಟ

## ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟ: 10 ರಿಂದ 27ನೇ ಸ್ಥಾನಕ್ಕಿಳಿದ ವಿಜಯನಗರ ಜಿಲ್ಲೆ। ಪರಿಣಾಮಕಾರಿ ವೆಬ್‌ಕಾಸ್ಟಿಂಗ್ ಅಡಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು

## ಹೊಸಪೇಟೆ ತಾಲೂಕಿಗೆ ಎಸ್.ವಿಶಾಲಾಕ್ಷಿ, ವಿ.ಸ್ನೇಹ, ಅಬ್ದುಲ್ಲಾ (ಪ್ರಥಮ), ಶ್ರೀಮಲ್ಲಿಕಾರ್ಜುನ (ದ್ವಿತೀಯ), ಎ.ಕುಶ್ವಂತ ನಾಯ್ಕ, ಕೌತಿಕಾವ್ಯ (ತೃತೀಯ) ಟಾಪರ್








**■ ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಆರು ವಿದ್ಯಾರ್ಥಿಗಳು ಟಾಪ್ ತ್ರಿ ಸ್ಥಾನ ಪಡೆದಿದ್ದಾರೆ. ಹೊಸಪೇಟೆ ಮಾಜಿ ಪುರಸಭೆಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಕನ್ನಡ ಮಾಧ್ಯಮದ ವಿದ್ಯಾರ್ಥಿನಿ ಎಸ್.ವಿಶಾಲಾಕ್ಷಿ 611 (ಶೇ.97.76), ಮರಿಯಮ್ಮನಹಳ್ಳಿಯ ಪ್ರಾರ್ಥನಾ ಇಂಗ್ಲೀಷ್ ಮಾದ್ಯಮ ಪ್ರೌಢಶಾಲೆಯ ವಿದ್ಯಾರ್ಥಿನಿ ವಿ.ಸ್ನೇಹ 611 (ಶೇ.97.76) ಮತ್ತು ಹೊಸಪೇಟೆ ಟಿಎಂಎಇಎಸ್ ರೋಸ್‌ಬಡ್ ಇಂಗ್ಲೀಷ್ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಅಬ್ದುಲ್ಲಾ 611 (ಶೇ.97.76) ಅಂಕ ಪಡೆದು ಪ್ರಥಮ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ. ಹೊಸಪೇಟೆ ತಾಲೂಕಿನ ತಿಮ್ಮಲಾಪುರ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಆಂಗ್ಲ ಮಾಧ್ಯಮದ ವಿದ್ಯಾರ್ಥಿ ಶ್ರೀಮಲ್ಲಿಕಾರ್ಜುನ 610 (ಶೇ.97.6) ದ್ವಿತೀಯ ಸ್ಥಾನ ಪಡೆದರೆ, ಹೊಸಪೇಠೆ ಸಹ್ಯಾದ್ರಿ ಆಂಗ್ಲ ಮಾದ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಎ.ಕುಶ್ವಂತ ನಾಯ್ಕ 609 (ಶೇ.97.44) ಮತ್ತು ಹೊಸಪೇಟೆ ಆದರ್ಶ ವಿದ್ಯಾಲಯ (ಆರ್‌ಎಂಎಸ್‌ಎ) ಆಂಗ್ಲ ಮಾಧ್ಯಮದ ವಿದ್ಯಾರ್ಥಿನಿ ಕೌತಿಕಾವ್ಯ 609 (ಶೇ.97.44) ಅಂಕ ಪಡೆಯುವ ಮೂಲಕ ತಾಲೂಕಿಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

2023–24 ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಗುರುವಾರ ಬೆಳಿಗ್ಗೆ ವೆಬ್‌ಸೈಟ್‌ನಲ್ಲಿ ಪ್ರಕಟಗೊಂಡಿದ್ದು, ರಾಜ್ಯದಲ್ಲಿ ವಿಜಯನಗರ ಜಿಲ್ಲೆ ಕಳೆದ ವರ್ಷ 10ನೇ ಸ್ಥಾನದಲ್ಲಿತ್ತು. ಈ ಬಾರಿ 27ನೇ ಸ್ಥಾನಕ್ಕಿಳಿದಿದ್ದರೂ, ಗುಲ್ಬರ್ಗಾ ವಿಭಾಗದ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಪೈಕಿ ವಿಜಯನಗರ ಜಿಲ್ಲೆ ಶೇ.65.61 ಫಲಿತಾಂಶ ಪಡೆದುಕೊಳ್ಳುವ ಮೂಲಕ ಪ್ರಥಮ ಸ್ಥಾನದಲ್ಲಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ಶೇ.61.75 ಫಲಿತಾಂಶ ಬಂದಿದ್ದು, ತಾಲೂಕಿನಲ್ಲಿ 89 ವಿದ್ಯಾರ್ಥಿಗಳು ಎಪ್ಲಸ್ ಗ್ರೇಡ್‌ನಲ್ಲಿ ಪಾಸಾಗಿದ್ದರೆ, 313 ವಿದ್ಯಾರ್ಥಿಗಳು ಎ ಗ್ರೇಡ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಹೊಸಪೇಟೆ ತಾಲೂಕಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 2495 ವಿದ್ಯಾರ್ಥಿಗಳ ಪೈಕಿ 1321 ವಿದ್ಯಾರ್ಥಿಗಳು (ಶೇ.52.94) ತೇರ್ಗಡೆಯಾಗಿದ್ದಾರೆ. 2898 ವಿದ್ಯಾರ್ಥಿನಿಯರ ಪೈಕಿ 2009 ವಿದ್ಯಾರ್ಥಿನಿಯರು(ಶೆ.69.32) ಉತ್ತೀರ್ಣರಾಗಿದ್ದಾರೆ. ಒಟ್ಟು 5393 ವಿದ್ಯಾರ್ಥಿಗಳ ಪೈಕಿ 3330 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದು, 2063 ವಿದ್ಯಾರ್ಥಿಗಳು ಮೊದಲ ಹಂತದ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ.

ಹೊಸಪೇಟೆ ತಾಲೂಕಿನಲ್ಲಿ ಶೇ.100 ಫಲಿತಾಂಶ ಪಡೆದ ಶಾಲೆಗಳ ಸಂಖ್ಯೆ ಶೂನ್ಯವಾಗಿದೆ. 12 ಶಾಲೆಗಳು ಶೇ.91–99 ವರೆಗೆ, 8 ಶಾಲೆಗಳು ಶೇ.81–90 ರವರೆಗೆ, 34 ಶಾಲೆಗಳು ಶೇ.51–80ವರೆಗೆ, 13 ಶಾಲೆಗಳು ಶೇ.41–50 ಮತ್ತು 14 ಶಾಲೆಗಳು ಶೇ.1–40ವರೆಗೆ ಫಲಿತಾಂಶ ಪಡೆದಿವೆ.

ತಾಲೂಕಿನ ಸರ್ಕಾರಿ ಶಾಲೆಗಳು ಶೇ.53.91 ಫಲಿತಾಂಶ ಪಡೆದರೆ, ಅನುದಾನಿತ ಶಾಲೆಗಳು ಶೆ.61.80 ಫಲಿತಾಂಶ ಪಡೆದಿವೆ. ಅನುದಾನ ರಹಿತ ಶಾಲೆಗಳು ಶೇ.70.33 ಫಲಿತಾಂಶ ಪಡೆದಿದ್ದು ಒಟ್ಟಾರೆ ತಾಲೂಕಿನ ಫಲಿತಾಂಶ ಶೇ.61.75 ಆಗಿದೆ.

> ಫಲಿತಾಂಶದ ನಿರೀಕ್ಷೆ ಹೆಚ್ಚುತ್ತು, ಆದ್ರೆ ನಮ್ಮಲ್ಲಿ ಪರಿಣಾಮಕಾರಿಯಾಗಿ ವೆಬ್‌ಕಾಸ್ಟಿಂಗ್ ಮಾಡಿದ್ದೇವೆ. ಕಲ್ಯಾಣ ಕರ್ನಾಟದಲ್ಲಿ ನಂ.1 ಸ್ಥಾನದಲ್ಲಿದ್ದೇವೆ. ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಇನ್ನೆರೆಡು ಅವಕಾಶಗಳಿದ್ದು ಆತಂಕಪಡೆಬೇಕಿಲ್ಲ. ಫಲಿತಾಂಶ ಕುಸಿದಿರುವ ಬಗ್ಗೆ ಗಮನಹರಿಸಲು ಡಿಸಿಪಿಐಗೆ ಸೂಚಿಸಲಾಗಿದೆ. ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.
>
> – ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ

## ಆದಿತ್ಯ ಎಸ್.ಎಂ.(621) ಜಿಲ್ಲೆಗೆ ಟಾಪರ್

### ವಿಜಯನಗರ ಜಿಲ್ಲೆಯ ಟಾಪರ್ಸ್



ಆದಿತ್ಯ ಎಸ್.ಎಂ.

1. ಕೊಟ್ಟೂರಿನ ಗುರುದೇವ ಆಂಗ್ಲ ಮಾದ್ಯಮ ಪ್ರೌಢಶಾಲೆಯ ಆದಿತ್ಯ ಎಸ್.ಎಂ. 621 ಅಂಕಗಳನ್ನ ಪಡೆದು ಜಿಲ್ಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದಾನೆ.
2. ಹರಪನಹಳ್ಳಿ ವಿವಿ ಎಸ್ ಹೈಸ್ಕೂಲ್‌ನ ಸಾಗರ ಕೆ.ಸಿ. 620 ಅಂಕ.
3. ಕೂಡ್ಲಿಗಿ ಜ್ಞಾನಭಾರತಿ ಆಂಗ್ಲ ಮಾಧ್ಯಮ ಶಾಲೆಯ ಶ್ರೇಯಾ ಎನ್.ಪಾಟೀಲ್ 619 ಅಂಕ.
4. ಉತ್ತಂಗಿಯ ಸರ್ಕಾರಿ ಪ್ರೌಢಶಾಲೆಯ ಚಿರಾಗ್.ಸಿ. 618 ಅಂಕ.
5. ಹೂವಿನಹಡಗಲಿಯ ಶ್ರೀ ಮರಿಸ್ವಾಮಿ ಮಠದ ಪಾಟಿಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಕೆ.ಎಸ್.ಲಿಖಿತ 617 ಅಂಕ.
6. ಕೊಟ್ಟೂರಿನ ಶ್ರೀ ವೀರಭದ್ರೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಕೆ.ಜಿ.ಪ್ರತಿಭಾ ಪಟೇಲ್ 617 ಅಂಕ.
7. ಹ.ಬೊ.ಹಳ್ಳಿ ಶಾರದ ಆಂಗ್ಲ ಮಾಧ್ಯಮ ಶಾಲೆಯ ಸಾತ್ವಿಕ್ ಆರ್.ಎನ್. 616 ಅಂಕ.
8. ಹೂವಿನಹಡಗಲಿ ಶ್ರೀ ಮರಿಸ್ವಾಮಿ ಮಠದ ಪಾಟಿಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಪ್ರವೀಣ್ ಕುಮಾರ್ ಪೂಜಾರ 615 ಅಂಕ.
9. ಕೊಟ್ಟೂರಿನ ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಸಂಜಯ್ ಎಂ. 615 ಅಂಕ.
10. ಹರಪನಹಳ್ಳಿಯ ವಿವಿಎಸ್ ಪ್ರೌಢಶಾಲೆಯ ಪ್ರತೀಕ್ ಎಂ.ಎಸ್. 615 ಅಂಕ

> ವರ್ಷದುದ್ದಕ್ಕೂ ಹಲವು ಪ್ರೋತ್ಸಾಹದಾಯಕ ಕಾರ್ಯಕ್ರಮಗಳ ಮೂಲಕ ಮಕ್ಕಳನ್ನು ತರಬೇತಿಗೊಳಿಸುವಲ್ಲಿ ಶಿಕ್ಷಕರು ಶ್ರಮಿಸಿದ್ದಾರೆ. ಕೆಲ ಸರ್ಕಾರಿ ಪ್ರೌಢ ಶಾಲೆಗಳು ಕಳೆದ ಬಾರಿಗಿಂತ ಶೇಕಡವಾರು ಅಧಿಕ ಫಲಿತಾಂಶ ಪಡೆದಿವೆ.
>
> – ಎಂ.ಚನ್ನಬಸಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ, ಹೊಸಪೇಟೆ.




## ಬೆಳಕಿನ ಹಾದಿ

# ಬಣ್ಣ ಬಳಿದುಕೊಂಡ ಕಾಗೆ

ಒಂದು ಕಾಗೆ ಒಬ್ಬ ರೈತನ ಹೊಲದಲ್ಲಿ ಗೂಡು ಕಟ್ಟಿಕೊಂಡಿತ್ತು. ರೈತ ಕೆಲವು ಪಾರಿವಾಳಗಳನ್ನು ಸಾಕಿಕೊಂಡಿದ್ದ. ಪ್ರತಿದಿನ ಅವುಗಳಿಗೆ ತಿನ್ನಲು ಕಾಳುಗಳನ್ನು ಕೊಡುತ್ತಿದ್ದನು. ಪಾರಿವಾಳಗಳು ಕಾಳುಗಳನ್ನು ತಿನ್ನುವುದನ್ನು ಕಾಗೆ ನೋಡುತ್ತಿತ್ತು. ಅದೂ ಸಹ ಕಾಳುಗಳನ್ನು ತಿನ್ನಲು ಬಯಸಿತು. ಕಾಳು ತಿನ್ನಲು ಏನಾದರೂ ಐಡಿಯಾ ಮಾಡಬೇಕು ಎಂದು ಆಲೋಚಿಸುತ್ತಿತ್ತು. ಹೀಗಿರಲು ಒಂದು ದಿನ ಹೊಲದ ಬಳಿ ಒಂದು ಬೂದು ಬಣ್ಣ ತುಂಬಿದ ಬಣ್ಣದ ಡಬ್ಬಿ ನೋಡಿತು. ಬಣ್ಣದ ಡಬ್ಬಿ ನೋಡಿದ ಕಾಗೆಗೆ ಬಂದು ಐಡಿಯಾ ಹೊಳೆಯಿತು. ಪಾರಿವಾಳದಂತೆಯೇ ಕಾಣಲು ತನ್ನ ದೇಹಕ್ಕೆ ಬೂದು ಬಣ್ಣವನ್ನು ಬಳಿದುಕೊಂಡಿತು.



ಬಣ್ಣ ಬಳಿದುಕೊಂಡ ಕಾಗೆ ಪಾರಿವಾಳಗಳ ಹಿಂಡನ್ನು ಸೇರಿಕೊಂಡಿತು. ಕಾಗೆಯು ಪ್ರತಿ ದಿನ ಕಾಳುಗಳನ್ನು ತಿನ್ನಲು ಆರಂಭಿಸಿತು. ಇದರಿಂದ ಪಾರಿವಾಳಗಳಿಗಾಗಲೀ, ರೈತನಿಗಾಗಲೀ ಯಾವುದೇ ಸಂದೇಹ ಬರಲಿಲ್ಲ. ಹೀಗೆಯೇ ದಿನಗಳು ಕಳೆದವು. ಬಂದು ದಿನ ಕಾಗೆ ಕಾಳು ತಿನ್ನುತ್ತಿರುವಾಗ ಹೊಲದ ಬೇಲಿಯ ಮೇಲೆ ಇನ್ನೊಂದು ಕಾಗೆ ಕುಳಿತಿರುವುದನ್ನು ನೋಡಿತು. ಬೇಲಿಯ ಮೇಲಿದ್ದ ಕಾಗೆ ಆಹಾರ ಹುಡುಕುತ್ತಾ 'ಕಾ,,,, ಕಾ,,,' ಎಂದು ಕೂಗಿತು. ಬಹುದಿನಗಳ ನಂತರ ತನಗೆ ಪರಿಚಿತವಿದ್ದ ಧ್ವನಿಯನ್ನು ಕೇಳಿದ ಬಣ್ಣ ಬಳಿದುಕೊಂಡಿದ್ದ ಕಾಗೆಗೆ ತನ್ನನ್ನು ನಿಯಂತ್ರಿಸಿಕೊಳ್ಳಲಾಗಲಿಲ್ಲ. ಅದಕ್ಕೆ ಪ್ರತಿಸ್ಪಂದನೆಯಾಗಿ ಜೋರಾಗಿ 'ಕಾ,,,,ಕಾ,,,, ಕಾ,,,' ಎಂದು ಕೂಗ ತೊಡಗಿತು.



ಈಗ ಪಾರಿವಾಳಗಳಿಗೆ ಅಚ್ಚರಿಯಾಯಿತು. ಅವು ತಮ್ಮ ಧ್ವನಿಯಲ್ಲಿ ಕೂಗಿದವು. ಆದರೆ ಬಣ್ಣ ಬಳಿದುಕೊಂಡ ಕಾಗೆಗೆ ಅವುಗಳಂತೆ ಕೂಗಲು ಬರಲಿಲ್ಲ. ಇದರಿಂದ ಇದು ಪಾರಿವಾಳ ಅಲ್ಲ, ಕಾಗೆ ಎಂಬುದು ಅವುಗಳಿಗೆ ಗೊತ್ತಾಯಿತು. ಕೂಡಲೇ ಅವುಗಳು ಒಟ್ಟಾಗಿ ಕಾಗೆಯನ್ನು ಕುಕ್ಕಿ ಕುಕ್ಕಿ ಗಾಯಗೊಳಿಸಿದವು. ಹೀಗೆ ಗಾಯಗೊಂಡ ಕಾಗೆ ಜೀವ ಉಳಿದರೆ ಸಾಕು ಎಂದು ಅಲ್ಲಿಂದ ತಪ್ಪಿಸಿಕೊಂಡು ಇತರೆ ಕಾಗೆಗಳು ಇರುವಲ್ಲಿಗೆ ಹೋಯಿತು. ಆದರೆ ಅವುಗಳಿಗೆ ಈ ಕಾಗೆಯನ್ನು ಗುರುತಿಸಲು ಆಗಲಿಲ್ಲ. ಯಾವ ಕಾಗೆಯೂ ಇದರ ಬಳಿ ಸುಳಿಯಲಿಲ್ಲ. ಬಣ್ಣ ಬಳಿದುಕೊಂಡ ಸಮೀಪಕ್ಕೆ ಬಂದರೆ ಸಾಕು ಉಳಿದ ಕಾಗೆಗಳು ದೂರ ಸರಿಯುತ್ತಿದ್ದವು.

ಇದರಿಂದ ಬೇಸರಗೊಂಡ ಬಣ್ಣ ಬಳಿದುಕೊಂಡ ಕಾಗೆ ತನ್ನ ಮೈಗೆ ಬಳಿದುಕೊಂಡಿದ್ದ ಬಣ್ಣವನ್ನು ಕಳಚಲು ನಿರ್ಧರಿಸಿತು. ಅದಕ್ಕಾಗಿ ನೀರಿನಲ್ಲಿ ಮುಳುಗಿ ಮುಳುಗಿ ಎದ್ದಿತು. ಪುಕ್ಕಕ್ಕೆ ಅಂಟಿಕೊಂಡ ಬಣ್ಣ ಹೋಗಲೇ ಇಲ್ಲ. ತನ್ನ ಕೊಕ್ಕಿನಿಂದ ಬಣ್ಣವನ್ನು ತೆಗೆಯಲು ಪ್ರಯತ್ನಿಸಿತು. ಕೊಕ್ಕಿನಿಂದ ಕುಕ್ಕಿದಷ್ಟೂ ಮೈಗೆ ಗಾಯವಾಯಿತೇ ವಿನಹ ಬಣ್ಣ ಮಾತ್ರ ಹೋಗಲೇ ಇಲ್ಲ. ಅನಿವಾರ್ಯವಾಗಿ ಬಣ್ಣ ಕಳೆದುಕೊಳ್ಳುವ ಪ್ರಯತ್ನವನ್ನು ನಿಲ್ಲಿಸಿತು. ತನ್ನೆಲ್ಲ ಬಳಗವನ್ನು ತೊರೆದು ದೂರದ ಸ್ಥಳಕ್ಕೆ ಹೋಗಿ ಒಂಟಿಯಾಗಿ ಬದುಕುವ ನಿರ್ಧಾರ ಮಾಡಿತು. ತಾನು ಮಾಡಿದ ತಪ್ಪಿನಿಂದ ತನ್ನ ಜೀವನವನ್ನೇ ಹಾಳು ಮಾಡಿಕೊಂಡಿತು. ಹೀಗೆ ನಾವು ಮಾಡುವ ಸಣ್ಣ ಸಣ್ಣ ತಪ್ಪುಗಳಿಂದ ಜೀವನಪರ್ಯಂತ ಒಂಟಿಯಾಗಿ ಬದುಕಬೇಕಾಗುತ್ತದೆ. ಆದ್ದರಿಂದ ತಪ್ಪುಗಳು ಆಗದಂತೆ ಎಚ್ಚರ ವಹಿಸುವುದು ಅಗತ್ಯವಲ್ಲವೇ? ನಮ್ಮ ಬಾಹ್ಯ ರಚನೆ ಹೇಗಿದೆಯೋ ಅದನ್ನು ಒಪ್ಪಿಕೊಂಡು ಬದುಕಬೇಕು. ಬಣ್ಣದ ಬದುಕಿಗೆ ಆಯುಷ್ಯ ಕಡಿಮೆ ಎಂದು ದೊಡ್ಡವರು ಹೇಳುವುದು ಇದಕ್ಕೆ ಇರಬೇಕು ಅಲ್ಲವೇ?

**– ಕೆ. ಗೋಣೆಮ್ಮ, ಜಿ.ಕೋಡಿಹಳ್ಳಿ**
ಹಗರಿಬೊಮ್ಮನಹಳ್ಳಿ(ತಾ) ವಿಜಯನಗರ(ಜಿ)

# ಬಸವ ಜಯಂತಿ ನಡೆದು ಬಂದ ದಾರಿ

ಬಸವಣ್ಣ' ಹೆಸರೆ ಮಹಾ ವಿಸ್ಮಯ. ಅವರ ವ್ಯಕ್ತಿತ್ವ ಹಾಗೂ ನಡೆದು ತೋರಿಸಿದ ದಾರಿ ಬೆರಗು ಹುಟ್ಟಿಸುವಂತಹದ್ದು. ಕಳೆದ 900 ವರ್ಷಗಳಿಂದ ಬಸವಣ್ಣರ ವ್ಯಕ್ತಿತ್ವ ಯಾರ ಕೈಗೂ ನಿಲುಕದ್ದು. ಅರಿತಷ್ಟು ಅರಿಯುತ್ತಲೇ ನಡೆಯುವ ಚೈತನ್ಯದ ಚಿಲುಮೆ. ಶರಣ ಬಳಗದ ಮುಕುಟ ಅಣ್ಣಾ ಬಸವಣ್ಣ. ಅವರ ವಚನ ಸಾಹಿತ್ಯವನ್ನು, ಕಾಯಕ ತತ್ವವನ್ನು, ಅನುಭವ ಮಂಟಪವನ್ನು, ಅವರ ಮನೋವೈಜ್ಞಾನಿಕತೆಯನ್ನು, ಸಮ-ಸಮಾಜದ ಸಮಾನತೆಯ ಸಿದ್ಧಾಂತವನ್ನು, ಅಸ್ಪೃಶ್ಯತೆಯನ್ನು ಸ್ಪೃಶ್ಯತೆಯನ್ನಾಗಿ ಮಾಡಿದ ಬಗ್ಗೆ, ಅವರ ಆರ್ಥಿಕ ಸಿದ್ಧಾಂತವಾದ 'ಕಾಯಕ' 'ದಾಸೋಹ'ದ ಬಗ್ಗೆ, ಅವರ ಬಹುಮುಖಿ ವ್ಯಕ್ತಿತ್ವ – ಸಿದ್ಧಾಂತ. ಕಾರ್ಯಾಚರಣೆಯನ್ನು ಕುರಿತು ಸಾವಿರಾರು ಸಂಖ್ಯೆಯಲ್ಲಿ ಸಂಶೋಧಕರು, ವಿದ್ವಾಂಸರು, ವಿಚಾರವಾದಿಗಳು, ಸಮಾಜೋ-ಆರ್ಥಿಕ ತಜ್ಞರು, ಸಾಹಿತಿಗಳು, ಮಠಾಧೀಶರು ಮೊದಲಾದವರು ನೂರಾರು ವರ್ಷಗಳಿಂದ ಅಧ್ಯಯನ, ಅಧ್ಯಾಪನೆ, ಸಂಶೋಧನೆ ವಿಶ್ಲೇಷಣೆ ಮಾಡುತ್ತಾ ಬಂದಿದ್ದಾರೆ. ಆದರೆ ಬಸವಣ್ಣನವರು ಮಾತ್ರ ಯಾರ ಆಳ-ಅಳತೆಗೂ ಸಿಗದ 'ಮಹಾ ಮಾನವತಾವಾದಿ'.

ಇಂಥ ಮಹಾಮಾನವತಾವಾದಿ ಬಸವಣ್ಣನವರು ಕನ್ನಡ ನಾಡಿನಲ್ಲಿಯೇ ಹುಟ್ಟಿ ಬೆಳೆದು, ಕಾರ್ಯನಿರ್ವಹಿಸಿ ಕನ್ನಡ ನಾಡಿನಲ್ಲೇ ಬಯಲಾಗಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. 900 ವರ್ಷಗಳ ಹಿಂದೆ ಸಾಮಾಜಿಕ ಕ್ರಾಂತಿ ಮಾಡಿದ ಬಸವಣ್ಣನವರನ್ನು ನೆನಪಿಸಿಕೊಂಡು ಅವರ 'ಜಯಂತಿ' ಆಚರಣೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಆದರೆ 'ಬಸವ ಜಯಂತಿ'ಯನ್ನು ಸರ್ಕಾರದ ವತಿಯಿಂದ ಆಚರಿಸುವ ಆದೇಶ ಹೊರಡಿಸುವ ಮುನ್ನವೇ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕಳೆದ 106 ವರ್ಷಗಳ ಹಿಂದಿಯೇ ಆಚರಣೆಗೆ ತಂದು ಹಳ್ಳಿ-ಹಳ್ಳಿ, ಮನೆ, ಮನೆಗಳಲ್ಲಿ, ಮಠ-ಮಂದಿರಗಳಲ್ಲಿ ಜಾತಿ ಭೇದಗಳಿಲ್ಲದೆ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬಂದಿರುವುದು ಈ ನಾಡಿನ ಮಠಮಾನ್ಯಗಳು, ಜನ ಸಾಮಾನ್ಯರು.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**
Hampi Times E-paper
SCAN AND READ

ಕರ್ನಾಟಕ ಸರ್ಕಾರವು ದಿನಾಂಕ 20-04-2007 ರಂದು ವಿಧಾನಸೌಧದ ಮುಂದೆ ಪ್ರಥಮ 'ಬಸವ ಜಯಂತಿ'ಯನ್ನು ಆಚರಿಸಿತು. ಸರ್ಕಾರದಿಂದ ಆಚರಿಸಿದ ಪ್ರಥಮ ಜಯಂತಿ ಇದು ಆಗಿರಬಹುದು. ಆದರೆ 1913 ರಿಂದಲೇ 'ಬಸವ ಜಯಂತಿ' ಯನ್ನು ಈ ನಾಡಿನಲ್ಲಿ ಆಚರಿಸಿಕೊಂಡು ಬರಲಾಗುತ್ತಿದೆ. ಹೌದು, ಪ್ರಪ್ರಥಮವಾಗಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಆಚರಿಸ ಬೇಕೆಂದು ಆಲೋಚಿಸಿ ಕಾರ್ಯರೂಪಕ್ಕೆ ತಂದು ಜಯಂತಿಯನ್ನು ಆಚರಿಸಿ ದವರು ಪರಮಪೂಜ್ಯ ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು ಹಾಗೂ ಹರ್ಡೇಕರ ಮಂಜಪ್ಪನವರು. ಈ ಹೊತ್ತಿನಲ್ಲಿ ಈ ಇಬ್ಬರು ಪೂಜ್ಯರಾದ ಶರಣರನ್ನು ನೆನೆಯಬೇಕಾಗಿದೆ. ಮ.ನಿ.ಪ್ರ. ಮೃತ್ಯುಂಜಯ ಮಹಾಸ್ವಾಮಿಗಳು ಧಾರವಾಡದ ಮುರುಘಾಮಠಕ್ಕೆ ಪೀಠಾಧ್ಯಕ್ಷರಾಗಿ ಬರುವ ಮುನ್ನ ದಾವಣಗೆರೆಯ ವಿರಕ್ತ ಮಠಾಧ್ಯಕ್ಷರಾಗಿದ್ದವರು. ಇವರು ದಾವಣಗೆರೆಯಲ್ಲಿ ಸಮಾಜ ಪರವಾದ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು



ನಿರ್ವಹಿಸುತ್ತಿದ್ದರು. ಹರ್ಡೇಕರ ಮಂಜಪ್ಪನವರು ಸಹ ಪೂಜ್ಯರೊಂದಿಗೆ ದಾವಣಗೆರೆಯಲ್ಲಿದ್ದು ಸಮಾಜ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ, ಮುದ್ರಿಸಿ ಜನರಿಗೆ ಹಂಚುವ ಕಾರ್ಯವನ್ನು ಹರ್ಡೇಕರ ಮಂಜಪ್ಪನವರು ನಿರ್ವಹಿಸುತ್ತಿದ್ದರು. ಇವರ ಬೆಂಬಲ, ಪ್ರೋತ್ಸಾಹಕ್ಕೆ ಮೃತ್ಯುಂಜಯ ಸ್ವಾಮೀಜಿಗಳಿದ್ದರು. ಪೂಜ್ಯರು, ಹರ್ಡೇಕರ ಮಂಜಪ್ಪನವರು ಹಾಗೂ ದಾವಣಗೆರೆಯ ಪ್ರಮುಖರು ಸೇರಿಕೊಂಡು ಆಲೋಚಿಸಿ, ಬಸವ ಜಯಂತಿಯನ್ನು ಆಚರಿಸುವ ಬಗ್ಗೆ ತೀರ್ಮಾನಿಸಿ ವೈಶಾಖ ಶುದ್ಧದಲ್ಲಿ ಬರುವ ರೋಹಿಣಿ ನಕ್ಷತ್ರವೇ ಬಸವ ಜಯಂತಿ ದಿನವೆಂದು ಗೊತ್ತು ಮಾಡಿದರು. 1913ರಂದು ಇದೇ ದಿನವೇ ಮೊದಲ 'ಬಸವ ಜಯಂತಿ'ಯನ್ನು ಆಚರಿಸಿದರು.

ಆ ದಿನ ಬಸವಣ್ಣನವರ ನಾಲ್ಕಾರು ನೈತಿಕ ವಚನಗಳನ್ನು ಆಯ್ದುಕೊಂಡು ಮುದ್ರಿಸಿ ಜನರಿಗೆ ಹಂಚಿದರು. ಮೊದಲ ಜಯಂತಿ ದಿನದಂದು ಹೊಳೆಹೊನ್ನೂರು ಪಟ್ಟಾಧ್ಯಾಕ್ಷರು ಬಸವ ಜಯಂತಿಯನ್ನು ನಕ್ಷತ್ರದ ಮೇಲೆಯೇ ಮಾಡುವುದು ಉತ್ತಮವೆಂದು, ಎಲ್ಲ ರಥೋತ್ಸವಗಳು ನಕ್ಷತ್ರದ ಮೇಲಿಂದಲೇ ಜರುಗುತ್ತವೆಂದು ಸೂಚಿಸಿದ್ದರು. ಶ್ರೀಗಳ ಸೂಚನೆ ಎಲ್ಲರಿಗೂ ಒಪ್ಪಿಗೆಯಾಯಿತು. ಮುಂದಿನ ವರ್ಷ ಅಂದರೆ 1914ರಿಂದ ರೋಹಿಣಿ ನಕ್ಷತ್ರದ ಮೇಲೆಯೇ ಬಸವ ಜಯಂತಿಯನ್ನು ಆಚರಿಸಲಾಯಿತು. ಹೀಗೆ ಬಸವ ಜಯಂತಿಯ ಪ್ರಾರಂಭವಾದ ಬಗ್ಗೆ ಮಾಹಿತಿ ಸಿಗುತ್ತದೆ. ದಾವಣಗೆರೆಯಲ್ಲಿ ಬಸವ ಜಯಂತಿ ಪ್ರಾರಂಭವಾಗಿ, ಮುಂದೆ ಬೆಂಗಳೂರಿನಲ್ಲಿ ಜೀರಗೆ ಬಸವಲಿಂಗಪ್ಪನವರು ಬಸವ ಜಯಂತಿಯನ್ನು ಪ್ರಾರಂಭಿಸಿದ್ದರು.

1913ರಲ್ಲಿ ದಾವಣಗೆರೆಯಲ್ಲಿ ಆರಂಭವಾದ 'ಬಸವ ಜಯಂತಿ' ಕನ್ನಡ ನಾಡಿನಲ್ಲಿ ಆಚರಿಸಲ್ಪಟ್ಟಿತ್ತು. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶದ ನಿಜಾಂನ ಆಳ್ವಿಕೆಯ ಪ್ರದೇಶದಲ್ಲಿ 'ಬಸವ ಜಯಂತಿ'ಗೆ ಅವಕಾಶಗಳಿರಲಿಲ್ಲ. 1924ರಲ್ಲಿ ಯಾದಗಿರಿಯ ಸಂಸ್ಕೃತ ಶಾಲೆಗೆ 'ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಯವರು ಅಧ್ಯಾಪಕರಾಗಿ ಬಂದ ಮೇಲೆ ಅಲ್ಲಿಯು 'ಬಸವ ಜಯಂತಿ'ಯನ್ನು ಪ್ರಾರಂಭಿಸಿದರು. 1924ರಲ್ಲಿ ಧಾರವಾಡ ಮೃತ್ಯುಂಜಯ ಸ್ವಾಮೀಜಿಗಳ ಅಪ್ಪಣೆಯಂತೆ 'ಭಗವಾನ್ ಬಸವೇಶ್ವರರ ಜಯಂತಿ' ಎಂಬ ಪುಸ್ತಕವನ್ನು ಬರೆದು ತಾವೇ 'ಚಂದ್ರಶೇಖರ ಶಾಸ್ತ್ರಿ' ಎಂಬ ಗ್ರಂಥಮಾಲೆಯನ್ನು ಆರಂಭಿಸಿ ಆ ಮೂಲಕ ಪುಸ್ತಕವನ್ನು ಪ್ರಕಟಿಸಿ, ಜನರಿಗೆ ಉಚಿತವಾಗಿ ಹಂಚುವ ಮೂಲಕ ಜನರಲ್ಲಿ 'ಬಸವ ಜಯಂತಿ'ಯನ್ನು 'ನಾಡಹಬ್ಬ' ವೆಂದು ಆಚರಿಸಿ ನಿಜಾಂನಿಗೆ ಸೆಡ್ಡು ಹೊಡೆದವರು ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಯವರು. ಪ್ರತಿ ವರ್ಷ ಬಸವಣ್ಣನವರ ಕುರಿತು ಲೇಖನ, ಭಾಷಣ ಆಯೋಜಿಸುವ ಮೂಲಕ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ 'ಬಸವ ಜಯಂತಿ'ಯನ್ನು ಜನಪ್ರಿಯಗೊಳಿಸಿದರು.

1963ರಲ್ಲಿ ಧಾರವಾಡದ ಮುರುಘಾಮಠದ 'ಮೃತ್ಯುಂಜಯ-ಶಿವಯೋಗಿಗಳ ಚರಿತ್ರೆ'ಯನ್ನು ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಯವರು ಬರೆದು ಪ್ರಕಟಿಸಿದ್ದಾರೆ. ಇದರಲ್ಲಿ ಬಸವ ಜಯಂತಿ ನಡೆದು ಬಂದ ದಾರಿ ಕುರಿತು ಬರೆದಿದ್ದಾರೆ. ಇಷ್ಟೇ ಅಲ್ಲದೆ ಮುಂದೆ ಬಸವ ಜಯಂತಿಯನ್ನು ಹೇಗೆ ಆಚರಿಸಬೇಕೆಂಬುದನ್ನು ಸಹ ಅವರು ಹೀಗೆ ಬರೆದಿದ್ದಾರೆ.

"ಬಸವ ಜಯಂತಿಯ ದಿನ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಬೇಕು. ಜಯಂತಿ ದಿನ ಸರ್ಕಾರದವರು ಸಂಪೂರ್ಣ ರಜೆ ಕೊಡಬೇಕಾಗುತ್ತದೆ. ಸರ್ಕಾರಿ ಕಚೇರಿಗಳಲ್ಲಿ ಬಸವಣ್ಣನವರ ಭಾವಚಿತ್ರವನ್ನು ಹಾಕಬೇಕು. ಒಂದು ಸಂಶೋಧನಾಲಯವನ್ನು ಸ್ಥಾಪಿಸಬೇಕು. ಬಸವಣ್ಣನವರ ಬೆಳಕು ಕೇವಲ ಕರ್ನಾಟಕದ ಮಟ್ಟಿಗೆ ಆಗಿಉಳಿಯಬಾರದು.ಬಸವಜಯಂತಿಯನ್ನುಪ್ರಾರಂಭಿಸಬೇಕಾದರೆ ಶ್ರೀಗಳು ಘನೋದ್ದೇಶದಿಂದ ಪ್ರಾರಂಭಿಸಿರುತ್ತಾರೆ. ಅದು ಈಗಿನಕ್ಕಿಂತ ನೂರ್ಮಡಿ ಹೆಚ್ಚಾಗಿ ವಿವಿಧ ವಿಧಾಯಕ ಕಾರ್ಯಗಳು ಜರಗಿ ಬಸವೇಶ್ವರರ ನಿಜವಾದ ಸ್ಮಾರಕಗಳಾಗಬೇಕಾಗಿರುತ್ತದೆ" ಎಂದಿದ್ದಾರೆ. ಅಂದರೆ 'ಬಸವ ಜಯಂತಿ'ಗೆ ಸರ್ಕಾರ ರಜೆ ಘೋಷಣೆ ಮಾಡುವುದು, ಅವರ ಭಾವಚಿತ್ರವನ್ನು ಸರ್ಕಾರಿ ಕಚೇರಿಗಳಲ್ಲಿ ಹಾಕಬೇಕೆಂದು 1963ರಲ್ಲೇ ಚಂದ್ರಶೇಖರ ಶಾಸ್ತ್ರಿಗಳು ಒತ್ತಾಯ ಮಾಡಿದ್ದಾರೆ. ಅವರ ಚಿಂತನೆಯೇ ಈಗ ಸರ್ಕಾರದಿಂದ 'ಬಸವ ಜಯಂತಿ' ಆಚರಣೆ, ಭಾವಚಿತ್ರ ಅಳವಡಿಕೆಯ ಆದೇಶ ಜಾರಿಯಾಗಿರುವುದು ಸಂತೋಷದ ಸಂಗತಿ. 1940ರಲ್ಲೇ 'ವ್ಯಾಕರಣತೀರ್ಥ' ಚಂದ್ರಶೇಖರ ಶಾಸ್ತ್ರಿಯವರು ಆಕಾಶವಾಣಿ – ಮೈಸೂರು ಕೇಂದ್ರದಲ್ಲಿ ಮೊಟ್ಟ ಮೊದಲ ಬಾರಿಗೆ 'ಬಸವೇಶ್ವರ ಜಯಂತಿ' ಕುರಿತ ಭಾಷಣ ಮಾಡಿದವರು. 1941ರಲ್ಲಿ 'ಜಗಜ್ಯೋತಿ ಬಸವೇಶ್ವರ' ಎಂಬ ಚಲನಚಿತ್ರವನ್ನು ಸಹ ಮಾಡಿದವರು. ಹೀಗೆ ಮೃತ್ಯುಂಜಯ ಸ್ವಾಮಿಗಳು ಹರ್ಡೇಕರ ಮಂಜಪ್ಪನವರು ನೂರು ವರ್ಷಗಳ ಹಿಂದೆಯೇ ರಾಜ್ಯ, ದೇಶದ ತುಂಬ ಬಸವಣ್ಣನವರ ಕೀರ್ತಿಯನ್ನು ಬೆಳಗಿಸಿದ್ದವರು.

1913ರಲ್ಲಿ ಮೃತ್ಯುಂಜಯ ಸ್ವಾಮಿಗಳು ಆರಂಭಿಸಿದ 'ಬಸವ ಜಯಂತಿ'ಗೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಧಾರವಾಡದ ಮುರುಘಾಮಠವು ಒಂದು ವರ್ಷ ಕಾಲ ವಿಶೇಷ ಕಾರ್ಯಕ್ರಮಗಳು, ಪುಸ್ತಕಗಳ ಪ್ರಕಟಣೆ, ಬಿಡುಗಡೆ ಮೊದಲಾದ ಕಾರ್ಯಕ್ರಮಗಳನ್ನು 2013ರಲ್ಲಿ ಹಮ್ಮಿಕೊಂಡು 'ಬಸವ ಜಯಂತಿ'ಯ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿತು. 'ಯುಗ ಯುಗದ ಉತ್ಸಾಹ' ಎಂಬ ಶತಮಾನೋತ್ಸವ ಸ್ಮರಣ ಸಂಪುಟದಲ್ಲಿ 113 ಲೇಖನಗಳನ್ನು ಸಂಗ್ರಹಿಸಿ, ಒಂದೆಡೆ ಪ್ರಕಟಿಸಿರುವುದು ಚಾರಿತ್ರಿ ಕಾರ್ಯವಾಗಿದೆ.

ತುಂಗಭದ್ರ ನದಿಯ ಹತ್ತಿರದ ದಾವಣಗೆರೆಯಲ್ಲಿ ಪ್ರಾರಂಭವಾದ 'ಬಸವ ಜಯಂತಿ' ನಾಡಿನ ತುಂಬ, ದೇಶದಲ್ಲಿ, ನಡೆಯುತ್ತ, ಲಂಡನ್ನಿನ ಥೇಮ್ಸ್ ನದಿ ಪಕ್ಕದಲ್ಲಿ ಬಸವಣ್ಣನವರ ಮೂರ್ತಿಯು ನಿರ್ಮಾಣಗೊಂಡು, ವಿಶ್ವದ ತುಂಬ ಜಯಂತಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ. ಇದರ ಹೆಗ್ಗಳಿಕೆ ಶ್ರೀ ಮೃತ್ಯುಂಜಯ ಶಿವಯೋಗಿಗಳಿಗೆ, ಹರ್ಡೇಕರ ಮಂಜಪ್ಪರಿಗೆ, ದಾವಣಗೆರೆಯ ಜನತೆಗೆ ಸಲ್ಲುತ್ತದೆ. ಸಮಸಮಾಜದ ಕನಸನ್ನು ಕಟ್ಟಿಕೊಂಡು ಅದನ್ನು ಕಾರ್ಯರೂಪಕ್ಕೆ ತಂದ ಮಹಾಮಾನವತಾವಾದಿ ಬಸವಣ್ಣನವರ ಜಯಂತಿ ಆಚರಣೆ ಈ ಕಾಲಘಟ್ಟದಲ್ಲಿ ಅನಿವಾರ್ಯ ಮತ್ತು ಅರ್ಥಪೂರ್ಣವಾಗಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಪಾರಮಾರ್ಥಿಕ ಸಾಧಕ ಬಸವಣ್ಣ

ಪಾರಮಾರ್ಥಿಕ ಸಾಧಕನಾಗಿ ಜಗಜ್ಯೋತಿ ಬಸವಣ್ಣ ವೈಶಾಖ ಮಾಸ ಶುಕ್ಲಪಕ್ಷ ತದಿಗೆಯ ದಿನವನ್ನು ಅಕ್ಷಯ ತೃತೀಯ ಎಂದು ಆಚರಿಸುವ ವಾಡಿಕೆ.ಕ್ಷಯ ಎಂದರೆ ನಾಶವಾಗುವದು.

ಅಕ್ಷಯ ಎಂದರೆ ನಾಶವಾಗದೇ ಇರುವುದು. ಅಂದರೆ ವೃದ್ಧಿಸುವುದು ಎಂದರ್ಥ. ಈ ದಿನ ಅದಾವ ಕಾರ್ಯವನ್ನು ಕೈಗೊಂಡರೂ ಅದು ವೃದ್ಧಿಸುತ್ತಲೇ ಇರುತ್ತದೆ. ಹಾಗಾಗಿ ಯಾವುದೇ ಶುಭ ಕಾರ್ಯಕ್ಕೆ ಮಂಗಳಕರವಾದುದು. ಅಂತೆಯೇ ಅಕ್ಷರಾಭ್ಯಾಸ, ಮದುವೆ, ಉಪನಯನ, ಗೃಹಪ್ರವೇಶ, ಹೊಸ ವ್ಯವಹಾರ ಆರಂಭ, ಬಂಗಾರ ಖರೀದಿ ಎಲ್ಲದಕ್ಕೂ ಸುಮುಹೂರ್ತದ, ಪಂಚಾಂಗಶುದ್ಧಿಯ ದಿನವೆಂದು ನಂಬಲಾಗಿದೆ.

ಪೌರಾಣಿಕವಾಗಿ ಹಿನ್ನೆಲೆಯಲ್ಲಿ ಅವಲೋಕಿಸುವುದಾದರೆ, ಮಹರ್ಷಿ ವೇದವ್ಯಾಸರು ಗಣಪತಿಯಿಂದ ಮಹಾಭಾರತ ಮಹಾಕಾವ್ಯ ಬರೆಯಲಾರಂಭಿಸಿದ ದಿನ. ಶ್ರೀವಿಷ್ಣು ಪರಶುರಾಮನಾಗಿ ಅವತಾರವೆತ್ತಿದ ದಿನ. ಶ್ರೀಕೃಷ್ಣನ ಅಣ್ಣ ಬಲರಾಮ ಜನ್ಮಿಸಿದ ದಿನ. ಪಾಂಡವರಿಗೆ ಶ್ರೀಕೃಷ್ಣನು ಅಕ್ಷಯ ಪಾತ್ರೆಯನ್ನಿತ್ತ ಸುದಿನ. ಪವಿತ್ರ ಗಂಗಾಮಾತೆ ನದಿಯಾಗಿ ಧರೆಗಿಳಿದ ದಿನ. ಕುಬೇರನು ಮಹಾಲಕ್ಷ್ಮಿಯನ್ನು ಪೂಜಿಸುವ ಶುಭ ದಿನ. ತ್ರೇತಾಯುಗ ಆರಂಭವಾದ ದಿನ. ಸೀತಾಮಾತೆ ಅಗ್ನಿ ಪರೀಕ್ಷೆಯಿಂದ ತಾನು ಪರಿಶುದ್ಧಳೆಂದು ತೋರಿಸಿ ಕೊಟ್ಟ ದಿನ. ಮತ್ತು ರಾವಣ ತನ್ನಣ್ಣ ಕುಬೇರನಿಂದ ಪಡೆದಲಂಕೆಯನ್ನು ಸ್ವರ್ಣ ಲಂಕೆಯನ್ನಾಗಿಸಲು ಭೂಮಿ ಪೂಜೆ ಮಾಡಿದ ದಿನ. ಇರಲಿ.



**ಲಕುಮಿಸುತ ಸಾರವಾಡ**
**ಹೊಸಪೇಟೆ**
Hampi Times E-paper
SCAN AND READ

12ನೇ ಶತಮಾನದ ಮಹಾಪುರುಷ ಜಗಜ್ಯೋತಿ ಬಸವೇಶ್ವರರು ಜನಿಸಿದ್ದು ಇದೇ ಅಕ್ಷಯ ತೃತೀಯಾ ದಿನದಂದು ಅಂತೆಯೇ ಬಸವ ಜಯಂತಿನ್ನು ಆಚರಿಸುತ್ತೇವೆ. ಬಸವಣ್ಣನವರ ಚರಿತ್ರೆಯನ್ನು ಅರಿಯದವರಾರೂ ಇಲ್ಲ. ಆದರೂ ಸಂಕ್ಷಿಪ್ತದಲ್ಲಿ ಹೇಳುವುದಾದಲ್ಲಿ ಇವರು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಇಂಗಳೇಶ್ವರ ಎಂಬ ಗ್ರಾಮದ ಬ್ರಾಹ್ಮಣ ಕುಲದಲ್ಲಿ ಜನ್ಮಿಸಿದರು. ಉಪನಯನವನ್ನು ತಿರಸ್ಕರಿಸಿ ಲಿಂಗೋಪಾಸಕರಾದರು. ಇವರ ಜಾಣ್ಮೆಗೆ ಮಂತ್ರಿ ಪದವಿ ದೊರೆಯಿತು. ಪಾರಮಾರ್ಥಿಕ ಜ್ಞಾನ ಇವರ ಮೇರು ವ್ಯಕ್ತಿತ್ವವಾಗಿ ಬೆಳೆಯಿತು. ಮೌಢ್ಯತೆ, ಮೂಢನಂಬಿಕೆ, ಜಾತಿ ಬೇಧಗಳ ಸಂಕೋಲೆಗಳಿಂದ ಹೊರಬರಲು, ಸಮಾನತೆಯ ಬೀಜ ಬಿತ್ತಲು ಕಾರಣರಾದರು. ಸಮಾಜಮುಖಿ ದಾರ್ಶನಿಕರಾದುದಲ್ಲದೇ ವಚನಗಳ ಮುಖಾಂತರ ಜನತೆಗೆ ತಿಳುವಳಿಕೆ ಬಿಂಬಿಸಿದರು. ಅಲ್ಲಮಪ್ರಭು ಅವರ ನೇತೃತ್ವದಲ್ಲಿ ಅನುಭವ ಮಂಟಪ ಮುಖಾಂತರ ಜನತೆಗೆ ಸಮಾನತೆ ಮತ್ತು ಧಾರ್ಮಿಕ ಸಂದೇಶ ಬೀರಲು ಶ್ರಮಿಸಿದರು. ಅಕ್ಕಮಹಾದೇವಿ, ಮಾದಾರ ಚೆನ್ನಯ್ಯ, ಹರಳಯ್ಯ, ಅಂಬಿಗರ ಚೌಡಯ್ಯ ಇನ್ನು ಅನೇಕ ಶರಣರು ಇವರನ್ನು ಹಿಂಬಾಲಿಸಿ ಶರಣ ಸಾಹಿತ್ಯ ಮುಖೇನ ಸಾಮಾಜಿಕ ಧಾರ್ಮಿಕ ಸಮಾನತೆಗಾಗಿ ಪ್ರಚಾರ ಮಾಡಿದರು. ಮುಂದೊಮ್ಮೆ ಧಾರ್ಮಿಕ ಕ್ರಾಂತಿಯಾಗಿ ಕೊನೆಗಾಲದಲ್ಲಿ ಕೂಡಲ ಸಂಗಮನಾಥನ ಸನ್ನಿಧಿಗೆ ಬಂದು ತಮ್ಮನ್ನು ತಾವು ಸಂಗಮನಾಥನಿಗೆ ಅರ್ಪಿಸಿಕೊಂಡದ್ದು ಇತಿಹಾಸ.



ಇಲ್ಲಿ ಅವರ ಚರಿತ್ರೆ ಎಷ್ಟು ಮುಖ್ಯವೋ ಅಷ್ಟೇ ಅವರ ತತ್ವ ಮುಖ್ಯವಾಗುತ್ತವೆ. ಈ ಮಹಾನ್ ಸಾಧಕರ ಬಗ್ಗೆ ಅನೇಕ ಗ್ರಂಥಗಳು ಪ್ರಪಂಚದ ನಾನಾ ಭಾಷೆಗಳಲ್ಲಿ ಪ್ರಕಟಗೊಂಡಿವೆ. ವಾಸ್ತವವಾಗಿ ಬಸವಣ್ಣನವರ ಬಸವ ಜಯಂತಿಯನ್ನು ಹೇಗೆ ಆಚರಿಸಲಾಗುತ್ತದೆ? ಎಂಬುದೂ ಕೂಡಾ ಮಹತ್ವದ್ದಾಗಿರುತ್ತದೆ. ಅವರ ಪುತ್ಥಳಿಗೆ, ಫೋಟೋಗೆ ಹಾರ ಹಾಕಿ, ಮರವಣಿಗೆ ಮಾಡಿ, ಸಿಹಿ ಹಂಚಿ, ಅವರ ನಾಲ್ಕು ವಚನದೊಡನೆ ಭಾಷಣ ಮಾಡಿ ಮರುದಿನ ಮಾಧ್ಯಮದಲ್ಲಿ ಪ್ರಚಾರ ಗಿಟ್ಟಿಸಿಕೊಂಡರೆ ಆಯಿತು ಎನ್ನುವ ಮಟ್ಟಿಗೆ ಬಂದಿದೆ.

ಬಸವಣ್ಣನವರನ್ನು ನಾವು ನೋಡುವ ದೃಷ್ಟಿಯಲ್ಲಿದೆ. ಅವರು ಒಬ್ಬ ನಿಷ್ಠಾವಂತ ರಾಜಕಾರಿಣಿ, ಕ್ರಾಂತಿಕಾರಿ, ಧರ್ಮ ಪ್ರತಿಪಾದಕ, ಸಾಹಿತಿ, ತತ್ವಜ್ಞಾನಿ, ಅದ್ಯಾತ್ಮಿಕ ಸಾಧಕ. ಹೀಗೆ ಅವರನ್ನು ಧನಾತ್ಮಕ ಮತ್ತು ದೈವತ್ವದ ಮನದಿಂದ ನೋಡಿದರೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣುತ್ತಾರೆ.

ಒಬ್ಬ ಮಹಾನ್ ಸಾಧಕರಾದವರು ಯಾವ ಜಾತಿಯಲ್ಲೇ ಜನಿಸಲಿ, ಅವರ ಉದ್ದೇಶ ಮಾನವ ಕುಲಕೋಟಿಯ ಉದ್ಧಾರ ಮತ್ತು ಮಾನವೀಯತೆಯೇ ಆಗಿರುತ್ತದೆ. ಈ ನಿಟ್ಟಿನಲ್ಲಿ ಹೇಳಬೇಕೆಂದರೆ ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿಗಳು, ಶಿರಡಿ ಶ್ರೀ ಸಾಯಿ ಬಾಬಾ, ಆದಿ ಗುರು ಶ್ರೀ ಶಂಕರಾಚಾರ್ಯರು, ಅಷ್ಟೇ ಯಾಕೆ, ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಕನ್ನೂರ ಶಾಂತಿ ಕುಟೀರದ ಶ್ರೀ ಸ.ಸ. ಗಣಪತರಾವ ಮಹಾರಾಜರು, ಹೀಗೆ ಹೆಸರಿಸುತ್ತ ಹೋದರೆ ಪಟ್ಟಿ ಬೆಳೆಯುತ್ತದೆ. ಇವರಾರೂ ಒಂದು ಜಾತಿ, ಪಂಗಡ ಗಳಿಗೆ ಸೀಮಿತರಲ್ಲ. ಇವರೆಲ್ಲ ಸರ್ವ ಜಾತಿ ಧರ್ಮಗಳಿಗೆ ಸಮಾನರು. ಇವರ ತತ್ವಗಳೆಲ್ಲ ಮಾನವನ ಉದ್ಧಾರಕ್ಕಾಗಿ ಎಂಬುದನ್ನು ನಾವೆಲ್ಲ ಅರಿಯಬೇಕಾಗಿದೆ.

ಸಾಧಕರು ಯಾವ ಧರ್ಮದಲ್ಲಿ ಜನಿಸಿದ್ದಾರೆ ಆ ಜಾತಿಯವರು – "ಇವರು ನಮ್ಮ ಧರ್ಮಲ್ಲಿ ಹುಟ್ಟಿದವರು" ಎಂದು ಬೀಗುವದು ಅಥವಾ ಆ ಸಾಧಕರು ಯಾವ ಧರ್ಮ ಪ್ರಚಾರ ಮಾಡಿದ್ದಾರೋ ಆ ಧರ್ಮದವರು "ಇವರು ನಮ್ಮ ಧರ್ಮ ಪ್ರಚಾರಕರು ನಾವೇ ಶ್ರೇಷ್ಠ" ಎಂದು ಬೀಗುವುದು ತರವಲ್ಲ. ಇದು ಸಮಾನತೆಗೆ ವ್ಯತಿರಿಕ್ತವಲ್ಲವೆ?

ದುರದೃಷ್ಟವೆಂದರೆ ಕೆಲವರು ಅಂಥವರನ್ನು ಒಂದು ಸೀಮಿತ ಗುಂಪಿನ ನಾಯಕ, ತಮ್ಮ ಸ್ವಂತ ಆಸ್ತಿ, ಎನ್ನುವಂತೆ ಬಿಂಬಿಸಿ ಸಂಕುಚಿತ ಭಾವನೆ ತೋರುತ್ತಾರೆ. ಈಗಿನ ಸಮಾಜದಲ್ಲಿ ಮಹಾತ್ಮಾ ಗಾಂಧಿ, ಡಾ. ಅಂಬೇಡ್ಕರ್ ಅವರಂತಹ ಮಹಾತ್ಮರಿಗೂ ಹೀಗೆಯೇ ಕೆಲವು ಸಂದರ್ಭದಲ್ಲಿ ಕೆಲವರು ಬಿಂಬಿಸುವದನ್ನು ಕಾಣುತ್ತಲಿದ್ದೇವೆ.

ಯಾದವ ಕುಲದಲ್ಲಿ ಶ್ರೀಕೃಷ್ಣ, ಕ್ಷತ್ರಿಯ ಕುಲದಲ್ಲಿ ಶ್ರೀ ರಾಮ ಜನಿಸಿದರೂ ಆರಾಧಿಸುತ್ತಿಲ್ಲವೇ? ವಾಲ್ಮೀಕಿ ಬರೆದ ರಾಮಾಯಣ, ಡಾ. ಅಂಬೇಡ್ಕರ್ ನೇತೃತ್ವದಲ್ಲಿ ರಚಿಸಿದ ಸಂವಿಧಾನ, ಹಾಗೂ ವ್ಯಾಸಮಹರ್ಷಿಗಳಿಂದ ಹೇಳಿಸಲ್ಪಟ್ಟು ಬರೆಸಿದ ಮಹಾಭಾರತ ಗ್ರಂಥಗಳನ್ನು ಗೌರವಿಸುತ್ತಿಲ್ಲವೆ? ಯಾವುದೇ ಗ್ರಂಥ, ಅಥವಾ ಸಾಧಕರ ತತ್ವಗಳು ಮಾನವೀಯತೆಯಿಂದ ಕೂಡಿದ ಮನುಜ ಕುಲದ ಉದ್ಧಾರಕ್ಕೆಂದು ಇದ್ದರೆ, ಜಾತಿ ಮತ, ಪಂಥ ಯಾವುದೂ ಲೆಕ್ಕಕ್ಕೆ ಬರುವುದಿಲ್ಲ.

ಧಾರ್ಮಿಕ ಸಾಧಕರು, ಲೌಕಿಕ ಸಾಧನೆ, ಲೌಕಿಕ ಫಲ – ಎರಡನ್ನೂ ತಾತ್ಕಲಿಕ ಎಂದೇ ತಿಳಿಸುತ್ತಾರೆ. ಯಾಕೆಂದರೆ ಇವರಡೂ ಕ್ಷಯ ಅಂದರೆ ಶಾಶ್ವತ ಅಲ್ಲ ಎಂದರ್ಥ.

ಪಾರಮಾರ್ಥಿಕ ಸಾಧನೆ, ಮತ್ತು ಅದರ ಫಲ – ಇವೆರಡೂ ಅಕ್ಷಯವಾಗಿರುತ್ತವೆ. ಅವು ನಾಶವಾಗದ ಮತ್ತು ಮನುಷ್ಯನ ಮೋಕ್ಷವೆಂಬ ಶಾಶ್ವತ ಸುಖಕ್ಕೆ ಕಾರಣವಾಗುತ್ತವೆ.

ಜಗಜ್ಯೋತಿ ಬಸವಣ್ಣನವರಂತಹ ಎಲ್ಲ ಮಹಾನ್ ಸಾಧಕರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸ್ವಯಂ ಉದ್ಧಾರವಾಗುವದಲ್ಲದೇ ಸರ್ವ ಸಮಾಜಗಳು ಉದ್ಧಾರವಾಗ ಬಹುದು. ಹಾಗೂ ಅದೊಂದು ಸಾರ್ಥಕ ಜಯಂತಿ ಆಚರಣೆ ಎನಿಸಿಕೊಳ್ಳುತ್ತದೆ.

## ಚಿಗುರಿದ ಆಸೆ



ಕೊಳಗಳು ಬತ್ತಿವೆ ತಳವನು ತೋರಿವೆ
ಬೆಳಗಳಿಗೆಲ್ಲಿ ಜಲತರಲಿ

ಮಳೆಹನಿ ಸುರಿದರೆ ಹೊಲದಲಿ ದುಡಿಯುವ
ಕಳಕಳಿ ತುಂಬಿ ರೈತರಲಿ

ಮಿಂಚಿನ ಬೆಳಕನು ಹಂಚಲು ಮೋಡವು
ಕುಂಚದ ಚಿತ್ರ ಬಾನೊಳಗೆ

ಸಂಚನು ಮಾಡದೆ ಸಿಂಚನ ಗೈಯಲು
ಮಿಂಚಿನ ಜೊತೆಗೆ ಮೆರವಣಿಗೆ

ಗುಡುಗಿನ ಸಹಚರ ಸಿಡಿಲಿನ ಸದ್ದಿಗೆ
ನಡುಗಿದೆ ಭೂಮಿ ಭಯದಲ್ಲಿ

ಕೊಡುವುದು ಮೇಘವು ಜಡಿಮಳೆ ಭೂಮಿಗೆ
ಪಡಯಲು ತಾಳ್ಮೆ ನಮಗಿರಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಬಸವ ಸಾಹಿತ್ಯ : ಪಕ್ಷಿನೋಟ

ಕರ್ನಾಟಕದ ಇತಿಹಾಸದಲ್ಲಿ ಶರಣ ಚಳುವಳಿಗೆ ಜಾಗತಿಕ ಮಟ್ಟದ ಮನ್ನಣೆ ಸಲ್ಲುತ್ತದೆ. ಸಾಮಾನ್ಯವಾಗಿ ಚಳುವಳಿಗಳು ಸಾಹಿತ್ಯೇತರ ಚಟುವಟಿಕೆಯಿಂದ ರೂಪುಗೊಂಡಿರುತ್ತವೆ. 12ನೇ ಶತಮಾನದ ಬಸವಾದಿ ಪ್ರಮಥರು ತಮ್ಮ ಚಳುವಳಿಯ ಮೂಲ ಆಶಯವನ್ನು ವಿಚಾರಗಳಿಂದ, ಆ ವಿಚಾರಗಳ ಆಚರಣೆಯಿಂದ ಆರಂಭಿಸಿದರು. ಇಂಥ ವಿಚಾರ–ಆಚಾರ ಅಂದರೆ ನುಡಿ–ನಡೆ ಅನುಷ್ಠಾನಗೊಂಡ ಸಾಹಿತ್ಯವೇ ವಚನವೆನಿಸಿತು. ವೈಚಾರಿಕ ಸಾಹಿತ್ಯಕ್ಕೆ ಎಂಥ ಶಕ್ತಿಯಿದೆಯೆಂದರೆ ಪ್ಲೇಟೋನಂಥ ದಾರ್ಶನಿಕರು ತಮ್ಮ ಆದರ್ಶ ರಾಜ್ಯದಲ್ಲಿ ಅನುಕರಣಾತ್ಮಕ ಬರವಣಿಗೆಗೆ ಇಂಬು ಇಲ್ಲವೆನ್ನುವುದರ ಮೂಲಕ ಸಮಾಜದಲ್ಲಿ ಸಾಹಿತ್ಯ ಸಾಧಿಸಬಹುದಾದ ಸಾಧಕ–ಬಾಧಕಗಳನ್ನು ಚರ್ಚಿಸುತ್ತಾನೆ. ಅದರ ವಾರಸುದಾರರಾದ ಕವಿಗಳ ಸಾಮಾಜಿಕ ಜವಾಬ್ದಾರಿಯೇನೆಂಬುದನ್ನು ವಿಮರ್ಶೆಗೆ ಒಡ್ಡುತ್ತಾನೆ. ಅಂಥದ್ದೇ ಕಲ್ಯಾಣ ರಾಜ್ಯದ ಕಲ್ಪನೆಯಿಂದ ಹುಟ್ಟಿದ ಬಸವಾದಿ ಪ್ರಮಥರ ಚಳುವಳಿ ವಚನ ಸಾಹಿತ್ಯದ ಮೂಲಕ ಸಮಾಜದಲ್ಲಿ ವೈಚಾರಿಕ, ವೈಜ್ಞಾನಿಕ ಬದುಕನ್ನು ಬಾಳಬೇಕೆಂಬ ಸಂದೇಶವನ್ನು ನೀಡಿತು. ಈ ಕಾರಣವಾಗಿ ವಚನಸಾಹಿತ್ಯ ಈ ಹೊತ್ತಿನವರೆಗೂ ಅನೇಕ ರೀತಿಯ ಆಲೋಚನೆಗಳಿಗೆ, ಅನುಸಂಧಾನಗಳಿಗೆ ಒಳಗಾಗಿ ವಿಭಿನ್ನ ಅಧ್ಯಯನ ನೆಲೆಗಳನ್ನು ರೂಪಿಸಿಕೊಂಡು ಬೆಳೆದಿದೆ. ಅದರಲ್ಲೂ "ಬಸವ ಸಾಹಿತ್ಯ" ಅಂದರೆ ಬಸವಣ್ಣನವರ ಜೀವನ. ಆತನ ವಚನಗಳ ಅಧ್ಯಯನ ಆಧುನಿಕ ಕಾಲದಲ್ಲಿ ವಚನಗಳ ಅನುವಾದ. ಬಸವಣ್ಣನವರನ್ನು ಕುರಿತು ರಚನೆಯಾದ ಕಾವ್ಯ, ಕಾದಂಬರಿ, ನಾಟಕ, ಇತ್ಯಾದಿ ಸಾಹಿತ್ಯವನ್ನು ಗಮನಿಸಿದರೆ ಪ್ರಾಯಶಃ ಜಾಗತಿಕ ಮಟ್ಟದ ಯಾವ ದಾರ್ಶನಿಕರನ್ನು ಕುರಿತು ಈ ಪ್ರಮಾಣದ ಸಾಹಿತ್ಯ ರಚನೆಯಾಗಿರಲಿಕ್ಕಿಲ್ಲ.

ಬಸವ ಸಾಹಿತ್ಯವನ್ನು ವಚನ, ಸ್ವರವಚನ, ಕಾಲಜ್ಞಾನ ಸಾಹಿತ್ಯದ ಹಿನ್ನೆಲೆಯಲ್ಲಿ ಬಸವಣ್ಣನೇ ರಚನೆ ಮಾಡಿದ ಸಾಹಿತ್ಯ ಸಮೀಕ್ಷೆ ಈ ಲೇಖನದ ಒಂದು ಆಶಯವಾದರೆ; ಈತನ ವಚನಗಳನ್ನು ಸ್ಥಲಕಟ್ಟುಗಳ ಆಧಾರದ ಮೇಲೆ ಸಂಕಲನಗೊಳಿಸಿದ ಕಾರ್ಯ, ವಚನಗಳನ್ನಾಧರಿಸಿ ರೂಪುಗೊಂಡ ಬಸವಣ್ಣನ ಜೀವನ ಚರಿತ್ರೆಗಳು, ಕಾವ್ಯ–ಪುರಾಣಗಳು. ಆಧುನಿಕ ಲೇಖಕರ ಸಾಹಿತ್ಯದ ವಸ್ತುವಾಗಿ ರಚನೆಗೊಂಡ ನಾಟಕ, ಕಾದಂಬರಿ, ಕಾವ್ಯಗಳು ಬಸವಸಾಹಿತ್ಯದ ಅಧ್ಯಯನ ನೆಲೆಗಳನ್ನು ವಿಸ್ತರಿಸಿದ ಪ್ರಮೇಯಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಈ ಎಲ್ಲ ಮುಖಗಳನ್ನು ಪರಿಚಯಿಸುವುದು ಅಸಾಧ್ಯವಾ ದರೂ, ಬಹುಮುಖ್ಯವಾದ ನೆಲೆ ಗಳನ್ನು ಗುರುತಿಸಬಹುದು. ಅಧ್ಯಯ ನದ ಅನುಕೂಲಕ್ಕಾಗಿ ಬಸವಣ್ಣನ ವರಿಂದ ರಚನೆಗೊಂಡ ಸಾಹಿತ್ಯ ಮತ್ತು ಬಸವಸಾಹಿತ್ಯವನ್ನು ಕುರಿತು ಇತರರು ರೂಪಿಸಿದ ಸಾಹಿತ್ಯವೆಂದು ವರ್ಗೀಕರಿಸಬಹು ದಾಗಿದೆ.





ಡಾ. ಕೆ. ರವೀಂದ್ರನಾಥ
ಹಿರಿಯ ಸಂಶೋಧಕರು, ಕನ್ನಡ.ವಿ.ವಿ ಹಂಪಿ

Hampi Times E-paper
SCAN AND READ

ಬಸವಣ್ಣನವರಿಂದ ಸೃಷ್ಟಿಯಾದ ಸಾಹಿತ್ಯ : ಈಗಾಗಲೇ ವಿದ್ವಾಂಸರ ಗಮನಕ್ಕೆ ಬಂದಂತೆ ವಚನ, ಸ್ವರವಚನ, ಕಾಲಜ್ಞಾನಗಳನ್ನು ಇಲ್ಲಿ ಸೇರಿಸಬಹುದು. ಪ್ರಸ್ತುತ ಬಸವಣ್ಣನವರ ವಚನಗಳನ್ನು ಆಗಾಗ ವಿಶ್ವವಿದ್ಯಾಲಯಗಳು, ವಿದ್ವಾಂಸರು ಹಾಗೂ ಸರ್ಕಾರದ ಬೇರೆ ಬೇರೆ ಇಲಾಖೆಗಳು ಸಂಪುಟ ರೀತಿಯಲ್ಲಿ ಪ್ರಕಟಿಸಿವೆ. ಕಾಲಜ್ಞಾನ ಕುರಿತಂತೆ "ಶ್ರೀ ಸಂಗನ ಬಸವರಾಜದೇವರು ನಿರೂಪಿಸಿದ ಕಾಲಜ್ಞಾನದ ವಚನ ಸಮಾಪ್ತ' ಎಂಬ ಪತ್ಯ ಲಭ್ಯವಿದೆ. ಹಾಗೆಯೇ ಸುಮಾರು 20ಕ್ಕೂ ಮಿಕ್ಕಿ ಸ್ವರವಚನಗಳು ದೊರೆತಿವೆ. ಬಸವಣ್ಣನವರ ವಚನಗಳಂತೆ ಆತನ ಕಾಲಜ್ಞಾನ ವಚನಗಳು ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ನೈತಿಕ ದೃಷ್ಟಿಯಿಂದ ಮಹತ್ವದ ಕೊಡುಗೆಗಳಾಗಿವೆ. ಹಾಗೆಯೇ ಈತನ ಸ್ವರವಚನಗಳನ್ನು ಅನುಭಾವಗೀತೆ, ಹಾಡು, ಕೈವಲ್ಯಪದಗಳು, ಭಜನೆಹಾಡುಗಳು ಎಂಬಿತ್ಯಾದಿ ಹೆಸರುಗಳಿಂದ ಕರೆದುದುಂಟು. ಇಲ್ಲಿ ಬಹುತೇಕ ಮನ, ಆತ್ಮ, ಜೀವ–ಪರಮರನ್ನು ಕುರಿತು ಸಂಬೋಧಿಸಲಾಗಿದೆ. ಹೀಗಾಗಿ ವಚನಗಳಲ್ಲಿ ವೈಚಾರಿಕತೆ ಕಾಣಿಸಿದರೆ; ಸ್ವರವಚನಗಳಲ್ಲಿ ಪಾರಮಾರ್ಥಿಕತೆ ಎದ್ದು ಕಾಣುತ್ತದೆ ಎಂದು ಸ್ಥೂಲವಾಗಿ ಹೇಳಬಹುದು.

ಇತರರಿಂದ ಸೃಷ್ಟಿಯಾದ ಸಾಹಿತ್ಯ : ಬಸವಣ್ಣನ ವಚನ, ಸ್ವರವಚನ, ಕಾಲಜ್ಞಾನ ಇತರೆ ಸಾಹಿತ್ಯವನ್ನನುಲಕ್ಷಿಸಿ ಮುಂದಿನ ಕವಿಗಳು, ದಾರ್ಶನಿಕರು, ಲೇಖಕರು ಕಾವ್ಯ–ಪುರಾಣ, ಚರಿತ್ರೆ, ಸ್ತುತಿ, ಪವಾಡಗಳಲ್ಲದೆ ಆಧುನಿಕ ಸಾಹಿತ್ಯ ಪ್ರಕಾರಗಳಾದ ಕವನ, ಕಾದಂಬರಿ, ನಾಟಕಗಳನ್ನು ರಚಿಸಿದ್ದಾರೆ. ಹೀಗಾಗಿ ಈ ಎಲ್ಲ ಪ್ರಯತ್ನಗಳನ್ನು ಪ್ರಸ್ತುತ ಲೇಖನದಲ್ಲಿ ಪ್ರಾಚೀನ ಮತ್ತು ಆಧುನಿಕ ಎಂಬ ಎರಡು ನೆಲೆಯಲ್ಲಿ ಸಂಗ್ರಹಿಸಿಕೊಡಬಹುದಾಗಿದೆ.

ಪ್ರಾಚೀನ ಸಾಹಿತ್ಯ : ಬಸವಣ್ಣ ಯುಗ ಪ್ರವರ್ತಕ ಶಕ್ತಿ. ತನ್ನ ಕಾಲಮಾನದಲ್ಲಿ ಮತ್ತು ಮುಂದಿನ ದಿನಮಾನಗಳಲ್ಲಿ ಕವಿಗಳ ಕಾವ್ಯದ ವಸ್ತುವಾದ ಧೀಮಂತ ವ್ಯಕ್ತಿ. ಹರಿಹರ ಹೇಳುವಂತೆ ಲೋಕದೊಳಗೆ ಬಸವಣ್ಣನ 'ಮಾತೇ ಮಾತು', 'ರೀತಿಯೇ ರೀತಿ', 'ನಿಷ್ಠೆಯೇ ನಿಷ್ಠೆ', 'ರಕ್ಷೆಯೇ ರಕ್ಷೆ', 'ಭಕ್ತಿಯೇ ಭಕ್ತಿ' ಎನ್ನುವಂತೆ ಅದು ಬಸವ ಸಿದ್ಧಾಂತವಾಗಿ ರೂಪುಗೊಂಡಿದೆ. ಪ್ರಾಯಶಃ ಈ ಕೆಳಗೆ ಉಲ್ಲೇಖಿಸಿದ ಕೃತಿಗಳನ್ನು ಗಮನಿಸಿದರೆ ನಮ್ಮ ಕವಿಗಳಿಗೆ ಬಸವನನ್ನು ಕುರಿತು ಬಾಯಿಬತ್ತುವವರೆಗೂ ಸ್ತುತಿಸಿದರೂ ಸಮಾಧಾನವಾಗಿಲ್ಲವೆನಿಸುತ್ತದೆ. ಬಹುಶಃ 12ನೇ ಶತಮಾನದ ವಚನಸಾಹಿತ್ಯ ಮುಂದೆ ಯಾವ ರೂಪದಲ್ಲಿ ಕಾಣಿಸಿಕೊಂಡಿತೆಂದರೆ ಶಿಷ್ಟ ಕವಿಗಳ ಕಾವ್ಯ–ಪುರಾಣ–ಚರಿತ್ರೆಗಳ ರೂಪದಲ್ಲಿ; ಪರಿಶಿಷ್ಟ ಕವಿಗಳ ಹಾಡು, ಸ್ತುತಿ, ಸ್ತೋತ್ರ, ರಗಳೆ, ತ್ರಿವಿಧಿ, ಯಕ್ಷಗಾನಗಳಂಥ ದೇಶೀ ಛಂದೋ ನೆಲೆಯಲ್ಲಿ ತನ್ನ ದರ್ಶನವನ್ನು ಪಡೆಯಿತು. ಬಸವಣ್ಣನವರನ್ನು ಕುರಿತು ಹರಿಹರನ ಬಸವರಾಜ ದೇವರರಗಳೆ; ಭೀಮಕವಿಯ ಬಸವಪುರಾಣ, ಸಿಂಗಿರಾಜ ಪುರಾಣ: ಷಡಕ್ಷರ ಕವಿಯ ಬಸವರಾಜ ವಿಜಯಗಳು ತುಂಬಾ ಮಹತ್ವದ ಕಾವ್ಯಗಳೆನಿಸಿವೆ. ಹಾಗೆಯೇ 15–16ನೇ ಶತಮಾನದಲ್ಲಿ ಬಸವಣ್ಣನವರನ್ನು ಕುರಿತು ಬಸವ ಚಾರಿತ್ರ ಬಸವ ತ್ರಿವಿಧಿ, ಬಸವನಾಮಾವಳಿ, ಬಸವಪವಾಡ, ಬಸವಲಿಂಗನಾಮೋಚ್ಚಾರ, ಬಸವಸ್ತೋತ್ರದ ಪಟ್ಟದಂಗಳು, ಬಸವೇಶ್ವರ ಪಂಚಸ್ತೋತ್ರ, ಬಸವೇಶ್ವರ ಪುರಾಣದ ಕಥಾಸಾಗರ, ಬಸವೇಶ್ವರ ಮಹಿಮಾ ಶತಕ, ಬಸವೇಶ್ವರಾಷ್ಟಕ, ಬಸವೇಶ್ವರ ಯಕ್ಷಗಾನ, ಬಸವಸ್ತೋತ್ರದ ಕಂದ, ಬಸವಪವಾಡದ ಸೋಬಾನೆ. ಬಸವಗಣ ಚಾರಿತ್ರ್ಯ, ಬಸವೇಶ್ವರ ವಚನಾರ್ಥಸಾರ (ಟೀಕು) ಇತ್ಯಾದಿಗಳನ್ನು ಗಮನಿಸಬಹುದು. ಈ ಕೃತಿಗಳನ್ನು ಕುರಿತು ವಿದ್ವಾಂಸರು ಗಂಭೀರವಾಗಿ ಅಧ್ಯಯನ ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ ಮತ್ತು ಸಂಶೋಧಕರಿಗೆ ಆಹ್ವಾನ ನೀಡುತ್ತದೆ.

ಮುಂದೆ ತೋಂಟದಾರ್ಯ ಪರಂಪರೆಯ ವಚನಸಂಕಲನ ಯುಗದಲ್ಲಿ ಎಳೆಮಲೆ ಗುರುಶಾಂತದೇವ: ಚೆನ್ನಂಜೆದೇವ ಮತ್ತು ಬೋಳಬಸವರ ಬಸವಸ್ತೋತ್ರದ ವಚನಗಳಲ್ಲಿ ಬಸವಣ್ಣನವರು ಲಿಂಗಾಯತ ಧರ್ಮದ ಜೀವಾಳ ಎಂಬಂತೆ ಚಿತ್ರಿತನಾಗಿದ್ದಾನೆ. ಬಸವಣ್ಣನ ವಚನಗಳಿಗೆ ಪಂಡಿತರು ಟೀಕು–ವ್ಯಾಖ್ಯಾನ– ನುಡಿ ಸಾಹಿತ್ಯವನ್ನು ರಚಿಸಿದ್ದಾರೆ. ವಿಶೇಷವಾಗಿ ಬಸವಣ್ಣನ ಷಟ್ಸ್ಥಲದ ವಚನಗಳಿಗೆ ಶಬ್ದಾರ್ಥ ಟೀಕೆ. ಕಠಿಣ ವಚನ ಟೀಕೆ, ಭಾವಾರ್ಥ ಟೀಕೆಗಳು ರಚನೆಗೊಂಡಿವೆ. ಇಷ್ಟೇ ಯಾಕೆ ಪಾಲ್ಕುರಿಕೆ ಸೋಮನಾಥನ ತೆಲುಗು 'ಬಸವ ಪುರಾಣಮು" ಕನ್ನಡದಲ್ಲಿ 'ಬಸವ ಪುರಾಣ', ಸಂಸ್ಕೃತದಲ್ಲಿ 'ಬಸವೇಶ ವಿಜಯ", ತಮಿಳಿನಲ್ಲಿ 'ಬಸವ ಪುರಾಣಂ" ಆಗಿ ರಚನೆಗೊಂಡಿದೆ.

ಬಸವಸಾಹಿತ್ಯ ಒಂದೊಂದು ಪ್ರತ್ಯೇಕ ಕೃತಿ ರಚನೆಗೆ ಆಕರವಾದಂತೆ: ಕೆಲವು ಮಹತ್ವದ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಚರ್ಚೆಯಾಗಿರುವುದು ಕಾಣುತ್ತೇವೆ. ಉದಾ:– ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಕಲ್ಲುಮಠದ ಪ್ರಭುದೇವರ "ಲಿಂಗಲೀಲಾವಿಲಾಸ ಚಾರಿತ್ರ್ಯಗಳಂಥ ಕೃತಿಗಳಲ್ಲದೆ; ಭಕ್ತಿರಸಸೋನೆ, ಶರಣ ಲೀಲಾಮೃತ ಹಾಗೂ ಎಲ್ಲ ಪುರಾತನರ ವಚನಗಳು ಇತ್ಯಾದಿಗಳನ್ನು ಇಲ್ಲಿ ಹೆಸರಿಸಬಹುದು. ಒಟ್ಟಿನಲ್ಲಿ ವಚನ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ದ್ವಿಪದಿ, ಶ್ಲೋಕ, ನಾಮಾವಳಿ, ಹಾಡು, ಕಥೆ, ಟೀಕೆ, ಚರಿತ್ರೆಗಳಂಥ ಪ್ರಭೇದಗಳಲ್ಲಿ 'ಬಸವ ಸಾಹಿತ್ಯ'ದ ಪ್ರಾಚೀನ ಅಧ್ಯಯನ ನಡೆದಿರುವುದನ್ನು ಗಮನಿಸಬಹುದು.

ಆಧುನಿಕ ಸಾಹಿತ್ಯ : ಬಸವ ಸಾಹಿತ್ಯ ಅಂದಿಗಿಂತ ಇಂದು ಪ್ರಸ್ತುತ. ರಾಜಕೀಯ ಕ್ಷೋಭೆ: ಧಾರ್ಮಿಕ ಜಿಜ್ಞಾಸೆ, ಸಾಮಾಜಿಕ ಅಸಮತೋಲನಗಳಿಂದ ಅವಿಭಕ್ತಪ್ರಜ್ಞೆ ಒಡೆದುಹೋಗಿ ವಿಭಕ್ತಗೊಂಡಿರುವ ಈ ಸಂದರ್ಭದಲ್ಲಿ ಬಸವ ಸಾಹಿತ್ಯದ ವಿವಿಧ ಆಯಾಮಗಳ ಅಧ್ಯಯನಗಳು ಶೈಕ್ಷಣಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಬೆಳಕು ಬೀರಬಲ್ಲವು. ಅಲ್ಲಮಪ್ರಭುವಿನ ಕೇಂದ್ರ ಸ್ಥಾನದಲ್ಲಿ ಉಳಿದ ಶರಣರ ತತ್ವಚಿಂತನೆಗಳನ್ನು ಬಿತ್ತರಿಸಿದ ಶೂನ್ಯಸಂಪಾದನೆಗಳು ಕನ್ನಡ ಪ್ರಸಂಗಸಾಹಿತ್ಯದ ವಿಸ್ತಾರಕ್ಕೆ ಎಡೆಮಾಡಿಕೊಟ್ಟವು. ಹೀಗಾಗಿ ಆಧುನಿಕ ಸಂದರ್ಭದಲ್ಲಿ ಬಸವಯಕ್ಷಗಾನ, ಕಲ್ಯಾಣಜ್ಯೋತಿ ಬಸವೇಶ್ವರ, ಕಲ್ಯಾಣವಾಣಿ, ಕ್ರಾಂತಿಯದೀಪ, ಕ್ರಾಂತಿಕಲ್ಯಾಣ, ಕೆಟ್ಟಿತ್ತುಕಲ್ಯಾಣ, ಮಹಾಚೈತ್ರ, ತೆಲೆದಂಡದಂತಹ ನಾಟಕಗಳು ರಚನೆಯಾಗಿವೆ. ಉದಯರವಿ, ಕಲ್ಯಾಣೇಶ್ವರ, ಕನ್ನಡ ಕುಲದೀಪ ಶ್ರೀ ಬಸವಣ್ಣನವರ ಜೀವನ, ರಾಜ್ಯಪಾಲ, ಕಲ್ಯಾಣೇಶ್ವರ, ಮುಗಿದಕನಸು, ಕ್ರಾಂತಿಕಲ್ಯಾಣ, ಕರ್ತಾರನ ಕಮ್ಮಟದಂತಹ ಹತ್ತಾರು ಕಾದಂಬರಿಗಳು ರಚನೆಗೊಂಡಿವೆ. ನವ್ಯ ಸಾಹಿತಿಗಳಿಗೆ ಬಸವಸಾಹಿತ್ಯದ ಪ್ರಭಾವ ಹೇರಳವಾಗಿದೆ. ಚನ್ನವೀರ ಕಣವಿ ಅವರ ವಿಶ್ವಭಾರತಿ ಕವನದ ಒಂದು ಸಾಲು "ಅರಿವೇ ಗುರು ನುಡಿ ಜ್ಯೋತಿರ್ಲಿಂಗ ದಯವೇ ಧರ್ಮದ ಮೂಲತರಂಗ" ಎಂಬ ಬಸವನ್ನನವರ ವಚನ, ಕಾವ್ಯಸಾಲುಗಳಾಗಿದ್ದನ್ನು ಇಲ್ಲಿ ಲಕ್ಷಿಸಬೇಕಾದ ಸಂಗತಿ. ದಲಿತ ಬಂಡಾಯ ಕವಿಗಳಿಗೆ ಬಸವ ಸಾಹಿತ್ಯ ಸಮಾಜಿಕ ಸಮಾನತೆಯ ಘೋಷಣೆಗಳಾದವು. ಈ ಎಲ್ಲ ಆಲೋಚನೆಗಳು ಬಸವ ಸಾಹಿತ್ಯದ ಅಧ್ಯಯನ ನೆಲೆಗಳಾಗಿವೆ. ಕನ್ನಡ ತತ್ವಪದ ಸಾಹಿತ್ಯಕ್ಕೆ ಈ ಸಾಹಿತ್ಯದ ಪ್ರಭಾವ ಪ್ರೇರಣೆಯನ್ನು ಗಮನಿಸಬಹುದು.

ಒಟ್ಟಿನಲ್ಲಿ 'ಬಸವ ಸಾಹಿತ್ಯ' ಒಟ್ಟು ಆಶಯವೇನು? ಎಂಬುದನ್ನು ಇಲ್ಲಿ ವಿಶ್ಲೇಷಿಸದೆ ಬಸವಣ್ಣನನ್ನು ಮತ್ತು ಆತನ ಸಾಹಿತ್ಯವನ್ನು ಕಾವ್ಯ–ಕಾದಂಬರಿ, ತತ್ವ–ಸಿದ್ಧಾಂತಗಳ ಪ್ರತಿಪಾದನೆಗೆ ಬಳಸಿಕೊಂಡ ಸ್ಥೂಲ ಪರಿಚಯವನ್ನು ಮಾತ್ರ ನೀಡಲಾಗಿದೆ.

## ಮಹನೀಯರ ಜಯಂತಿ ಕಾರ್ಯಕ್ರಮಕ್ಕೆ ಕಡ್ಡಾಯ ಹಾಜರಾಗಲು ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಈ ಅವಧಿಯಲ್ಲಿ 2024–25ನೇ ಸಾಲಿನ ಮಹನೀಯರ ಜಯಂತಿಗಳನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲು ತಿಳಿಸಿರುತ್ತಾರೆ.

ಆದ್ದರಿಂದ 2024–25ನೇ ಸಾಲಿನ ಶ್ರೀ ಬಸವ ಜಯಂತಿಯನ್ನು ಹಾಗೂ ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಮೇ 10 ರಂದು, ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಮೇ 12 ರಂದು ಮತ್ತು ಶ್ರೀ ಭಗೀರಥ ಜಯಂತಿಯನ್ನು ಮೇ 14 ರಂದು ಬೆಳಿಗ್ಗೆ 10.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತಿದ್ದು, ಈ ಕಾರ್ಯಕ್ರಮಗಳಿಗೆ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಂದಿಗೆ ಕಡ್ಡಾಯವಾಗಿ ಹಾಜರಾಗ ಬೇಕು ಹಾಗೂ ತಮ್ಮ ಅಧೀನ ಕಾರ್ಯಾಲಯಗಳಲ್ಲಿ ಸರಳ ಹಾಗೂ ಸಾಂಕೇತಿಕವಾಗಿ ಜಯಂತಿಗಳನ್ನು ಆಚರಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ.ಕಡಿ ಅವರು ತಿಳಿಸಿದ್ದಾರೆ.

## ಶಾಂತಮ್ಮ ನಿಧನ



**ಬೆಂಗಳೂರು:** ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಬಾಚಿಗೊಂಡನಹಳ್ಳಿಯ ಕೆ.ಕಾಳಮ್ಮ ಇವರ ದ್ವಿತೀಯ ಸುಪುತ್ರಿ ಶಾಂತಮ್ಮ(76) ಗುರುವಾರ ರಾತ್ರಿ ಬೆಂಗಳೂರಿನಲ್ಲಿ ನಿಧನರಾದರು.

ಮೃತರಿಗೆ ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧು–ಬಳಗವಿದೆ. ಮೃತರ ಅಂತ್ಯಕ್ರಿಯೆ ಬೆಂಗಳೂರಿನ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಬೆಳಿಗ್ಗೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ಮೇ 14ರಿಂದ ಲೋಕಾಯುಕ್ತ ಜನ ಸಂಪರ್ಕ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಲೋಕಾಯುಕ್ತ ಹೊಸಪೇಟೆ ಘಟಕದಿಂದ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಹಾಗೂ ಪೊಲೀಸ್ ನಿರೀಕ್ಷಕರ ನೇತೃತ್ವದಲ್ಲಿ ಮೇ 14, ಮೇ.16 ಮತ್ತು ಮೇ.28 ರಂದು ಲೋಕಾಯುಕ್ತ ಜನ ಸಂಪರ್ಕ ಸಭೆ ನಡೆಯಲಿದೆ.

ಸಾರ್ವಜನಿಕರು, ತಮ್ಮ ಕುಂದುಕೊರತೆಗಳನ್ನು, ಅಹವಾಲುಗಳನ್ನು ಹಾಗೂ ಸರ್ಕಾರಿ ಕೆಲಸಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕಚೇರಿಗಳಲ್ಲಿ ಅನಗತ್ಯ ವಿಳಂಬತೆ, ಕಿರುಕುಳ, ತೊಂದರೆ ಮತ್ತು ಅಧಿಕಾರಿ ಸಿಬ್ಬಂದಿಯವರ ದುರಾಡಳಿತಕ್ಕೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ, ಹಗರಿಬೊಮ್ಮನಹಳ್ಳಿಯ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮೇ 14ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ, ಹೂವಿನಹಡಗಲಿಯ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಮೇ 16ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಹಾಗೂ ಹೊಸಪೇಟೆಯ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಮೇ 28ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಈ ತಾಲೂಕು ಕೇಂದ್ರಗಳಲ್ಲಿ ನಿಗದಿಪಡಿಸಿದ ದಿನಾಂಕ ಹಾಗೂ ಸ್ಥಳಗಳಲ್ಲಿ ಸಾರ್ವಜನಿಕರು ಹಾಜರಾಗಿ ದೂರು ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕೆಂದು ಹೊಸಪೇಟೆಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಉಜ್ಜನಿ ಗ್ರಾಮದ ಜಾತ್ರೋತ್ಸವ : ಮದ್ಯ ಮಾರಾಟ ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ**

ಉಜ್ಜನಿ ಗ್ರಾಮದಲ್ಲಿ ನಡೆಯುವ ಶ್ರೀಮರುಳ ಸಿದ್ದೇಶ್ವರ ಸ್ವಾಮಿಯ ರಥೋತ್ಸವ ಹಾಗೂ ದೇವಸ್ಥಾನದ ಶಿಖರ ತೈಲಾಭಿಷೇಕ ಪ್ರಯುಕ್ತ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮೇ 12ರ ಬೆಳಿಗ್ಗೆ 06 ಗಂಟೆಯಿಂದ ಮೇ 13ರ ಮಧ್ಯರಾತ್ರಿ 10 ಗಂಟೆಯವರೆಗೆ ಉಜ್ಜಿನಿ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ಸಾಗಾಣಿಕೆ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ ತಿಳಿಸಿದ್ದಾರೆ.

## ಎಂಡಿಆರ್‌ಎಸ್ ವಸತಿ ವಿಜ್ಞಾನ ಕಾಲೇಜಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರೇಸಿಂದೋಗಿ ಮತ್ತು ಗಂಗಾವತಿ ತಾಲೂಕಿನ ಜಮಾಪುರದ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿಗೆ (ಪಿಸಿಎಮ್‌ಬಿ ಮತ್ತು ಪಿಸಿಎಮ್‌ಸಿಎಸ್) 10 ನೇ ತರಗತಿಯಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ ಮೆರಿಟ್ ಹಾಗೂ ಸರ್ಕಾರದ ಮೀಸಲಾತಿ ಆಧಾರದ ಮೇಲೆ ಪ್ರವೇಶ ನೀಡಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಉಚಿತವಾಗಿ ಸಮವಸ್ತ್ರ, ಪಠ್ಯಪುಸ್ತಕ, ಹಾಗೂ ಇನ್ನಿತರ ಸಾಮಾಗ್ರಿಗಳನ್ನು ನೀಡುವುದರ ಜೊತೆಗೆ ಗುಣಮಟ್ಟದ ವಿದ್ಯಾಭ್ಯಾಸ ನೀಡಲಾಗುವುದು. ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅಂದರೆ ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರವೇಶ ಲಭ್ಯವಿದೆ. 2024–25ನೇ ಸಾಲಿನ ಪ್ರಥಮ ಪಿಯುಸಿಗೆ 80 ವಿದ್ಯಾರ್ಥಿಗಳಿಗೆ(ಪಿಸಿಎಮ್‌ಬಿ ಮತ್ತು ಪಿಸಿಎಮ್‌ಸಿ ವಿಭಾಗಕ್ಕೆ) ಪ್ರವೇಶ ನೀಡಲಾಗುವುದು. ಶೇ.50 ಸ್ಥಾನಗಳು ವಿದ್ಯಾರ್ಥಿನಿಯರಿಗೆ ಮೀಸಲು. ಮೀಸಲಾತಿ ಬಯಸುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯದ ಮಿತಿ ಪ.ಜಾತಿ ಮತ್ತು ಪ.ವರ್ಗದ, ಹಿಂದುಳಿದ ವರ್ಗದ ಪ್ರವರ್ಗ–1 ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯದ ಮಿತಿ ರೂ.2,50,000,/– ಹಾಗೂ ಹಿಂದುಳಿದ ವರ್ಗ 2ಎ, 2ಬಿ, 3ಎ, 3ಬಿ ಗುಂಪಿಗೆ ಸೇರಿದ ವಿದ್ಯಾರ್ಥಿಗಳಿಗೆ ಆದಾಯ ಮಿತಿ ರೂ.1,00,000/– ಗಳು ಇರುತ್ತದೆ. ಅರ್ಜಿ ಸಲ್ಲಿಸಲು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರುವ ಕ್ರೈಸ್ತ್‌ನ ಯಾವುದೇ ವಸತಿ ಶಾಲೆ/ಸರ್ಕಾರಿ/ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ 10ನೇ ತರಗತಿ ಅಧ್ಯಯನ ಮಾಡಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಶರಣಗೌಡ–ಪ್ರಾಚಾರ್ಯರು ಮತ್ತು ಜಿಲ್ಲಾ ಸಮನ್ವಾಧಿಕಾರಿಗಳು ಕೊಪ್ಪಳ(7411999371), ಉಮೇಶ ಮಾಲಿಪಾಟೀಲ್, ಪ್ರಾಚಾರ್ಯರು ಮೊ.ದೇ.ಪ.ಪೂ.ವ.ವಿ ಕಾಲೇಜು ಜಮಾಪುರ ತಾ॥ಗಂಗಾವತಿ ಜಿ॥ ಕೊಪ್ಪಳ.(9743141876), ಪರಶುರಾಮ ದ್ವಿ.ದ.ಸಹಾಯಕ (9019531301), ಅಶೋಕ ಪೋಲಿಸ್ ಪಾಟೀಲ್ ದ್ವಿ.ದ.ಸಹಾಯಕ (9986586554) ಅಥವಾ ಹತ್ತಿರದ ವಸತಿ ಶಾಲೆಯ ಪ್ರಾಂಶುಪಾಲರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಸಮನ್ವಯಾಧಿಕಾರಿಗಳು ತಿಳಿಸಿದ್ದಾರೆ

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

## ವಿಜ್ಞಾನ

## ನಾಯಿ ಮತ್ತು ಬೆಕ್ಕುಗಳು ವಾಂತಿ ಮಾಡಿಕೊಳ್ಳಲು ಹುಲ್ಲನ್ನು ಏಕೆ ತಿನ್ನುತ್ತವೆ?

**ಆರ್.ಬಿ.ಗುರುಬಸವರಾಜ**

ಸೋನು ಮತ್ತು ರಜಿಯಾ ಮನೆಯ ಮುಂದೆ ಕುಂಟಾಬಿಲ್ಲೆ ಆಟ ಆಡುತ್ತಿದ್ದರು. ಹೀಗೆ ಆಟ ಆಡುವಾಗ ಇಬ್ಬರೂ ಒಂದು ಅಚ್ಚರಿಯನ್ನು ಗಮನಿಸಿದರು. ನಾಯಿಯೊಂದು ಹುಲ್ಲು ತಿನ್ನುವುದನ್ನು ನೋಡಿದರು. ಏನಿದು! ನಾಯಿ ಏಕೆ ಹುಲ್ಲು ತಿನ್ನುತ್ತಿದೆ? ಎಂದು ಚಕಿತರಾದರು. ನೋಡುತ್ತಿದ್ದಂತೆ ಹುಲ್ಲು ತಿಂದ ತಕ್ಷಣ ನಾಯಿಯು ವಾಂತಿ ಮಾಡಿಕೊಂಡಿತು. ನಂತರ ಈ ವಿಷಯವನ್ನು ಸೋನು ತಮ್ಮ ಅಂಕಲ್ ಬಳಿ ಹಂಚಿಕೊಂಡರು. ನಾಯಿಯೊಂದೇ ಅಲ್ಲ, ಕೆಲವು ವೇಳೆ ಬೆಕ್ಕೂ ಸಹ ಹುಲ್ಲು ತಿಂದು ವಾಂತಿ ಮಾಡಿಕೊಳ್ಳುತ್ತದೆ ಎಂದು ಅಂಕಲ್ ತಿಳಿಸಿದರು. “ಅಂಕಲ್, ಬೆಕ್ಕು ಮತ್ತು ನಾಯಿಗಳೇಕೆ ಹುಲ್ಲು ತಿನ್ನುವ ಮೂಲಕ ವಾಂತಿ ಮಾಡಿಕೊಳ್ಳುತ್ತವೆ?” ಎಂದಳು ರಜಿಯಾ. ಇವರ ಪ್ರಶ್ನೆಗೆ ಅಂಕಲ್ ಉತ್ತರ ಹೀಗಿತ್ತು.



ನಾಯಿ ಮತ್ತು ಬೆಕ್ಕುಗಳು ಮಿಶ್ರಾಹಾರಿ ಪ್ರಾಣಿಗಳಾದರೂ ಆಹಾರಕ್ಕಾಗಿ ಹುಲ್ಲನ್ನು ತಿನ್ನುವುದಿಲ್ಲ ಎಂಬುದು ಗಮನಾರ್ಹ. ಆದಾಗ್ಯೂ ಕೆಲವು ವೇಳೆ ಇವೆರಡೂ ಪ್ರಾಣಿಗಳು ಹುಲ್ಲು ತಿನ್ನುತ್ತವೆ. ನಾಯಿ ಮತ್ತು ಬೆಕ್ಕು ವಾಂತಿ ಮಾಡಿಕೊಳ್ಳಲು ಹುಲ್ಲನ್ನು ತಿನ್ನಲು ಕೆಲವು ಕಾರಣಗಳಿವೆ. ಒಂದು ಸಿದ್ಧಾಂತದ ಪ್ರಕಾರ ನಾಯಿ ಮತ್ತು ಬೆಕ್ಕುಗಳು ಹೊಟ್ಟೆ ಅಜೀರ್ಣತೆಯನ್ನು ಶಮನಗೊಳಿಸಲು ಅಥವಾ ವಾಂತಿಗೆ ಪ್ರೇರೇಪಿಸಲು ಹುಲ್ಲನ್ನು ತಿನ್ನುತ್ತವೆ. ಹುಲ್ಲು ತಿನ್ನುವುದರಿಂದ ಜೀರ್ಣವಾಗದೇ ಉಳಿದ ಆಹಾರವನ್ನು ಹೊರಹಾಕಲು ಅಥವಾ ಅಕ್ಷೇಪಾರ್ಹ ಆಹಾರವನ್ನು ಹೊರಹಾಕಲು ವಾಂತಿ ಮಾಡಿಕೊಳ್ಳುತ್ತವೆ.

ಮತ್ತೊಂದು ಸಿದ್ಧಾಂತವೆಂದರೆ ನಾಯಿ ಮತ್ತು ಬೆಕ್ಕುಗಳು ತಮ್ಮ ಆಹಾರದಲ್ಲಿ ಕೆಲವು ಪೋಷಕಾಂಶಗಳ ಕೊರತೆಯಿಂದಾಗಿ ಹುಲ್ಲು ತಿನ್ನುತ್ತವೆ. ಹುಲ್ಲು ನಾರಿನಂಶ ಹೊಂದಿರುತ್ತದೆ. ಇದು ಜೀರ್ಣಕ್ರಿಯೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಜೊತೆಗೆ ಕೆಲವು ಜೀವಸತ್ವಗಳು ಮತ್ತು ಖನಿಜಗಳನ್ನು ಹೊಂದಿರುತ್ತದೆ.

ಹುಲ್ಲು ತಿನ್ನುವ ಎಲ್ಲಾ ನಾಯಿ ಮತ್ತು ಬೆಕ್ಕುಗಳು ವಾಂತಿ ಮಾಡುವುದಿಲ್ಲ. ಆದರೆ ಹುಲ್ಲು ತಿನ್ನುವುದರಿಂದ ಹೊಟ್ಟೆಯೊಳಗಿನ ಎಲ್ಲಾ ಆಹಾರವನ್ನು ವಾಂತಿ ಮಾಡಿಕೊಳ್ಳುತ್ತವೆ ಎಂಬುದನ್ನು ಗಮನಿಸುವುದು ಮುಖ್ಯ. ಸಾಕುಪ್ರಾಣಿಗಳು ಆಗಾಗ್ಗೆ ವಾಂತಿ ಮಾಡುತ್ತಿದ್ದರೆ ಕಾರಣವನ್ನು ನಿರ್ಧರಿಸಲು ಪಶುವೈದ್ಯರನ್ನು ಸಂಪರ್ಕಿಸುವುದು ಉತ್ತಮ.




## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**10–05–2024 – ಶುಕ್ರವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೋಹಿಣಿ |
| ಯೋಗ | : ಅತಿಗಂಡ |
| ಕರಣ | : ತೈತುಲ |
| ಸೂರ್ಯೋದಯ | : 05:49:21 |
| ಸೂರ್ಯಾಸ್ತ | : 18:57:34 |
| ರಾಹು | : 10:45–12:23 |
| ಯಮಘಂಡ | : 15:41–17:19 |
| ಗುಳಿಕ | : 07:28–09:06 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 09–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.69 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.450 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1576.01 ಅಡಿ |
| ಒಳ ಹರಿವು | 1272 ಕ್ಯುಸೆಕ್ |
| ಹೊರ ಹರಿವು | 113 ಕ್ಯುಸೆಕ್ |
| ಸಾಮರ್ಥ್ಯ | 2.827 ಟಿಎಂಸಿ |







# ವಿಜಯನಗರ ಜಿಲ್ಲೆಯಲ್ಲಿ ಶೇ.65.60 ಎಸ್‌ಎಸ್‌ಎಲ್ಸಿ ಫಲಿತಾಂಶ : ಡಿಡಿಪಿಐ

■ **ಹಂಪಿ ಟೈಮ್ಸ್ ಹೊಸಪೇಟೆ**

2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಮೇ 9ರಂದು ಪ್ರಕಟವಾಗಿದ್ದು, ವಿಜಯನಗರ ಜಿಲ್ಲೆಯ ಫಲಿತಾಂಶವು ಒಟ್ಟಾರೆ 65.60 ಆಗಿರುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 2814 ವಿದ್ಯಾರ್ಥಿಗಳ ಪೈಕಿ 2209 ವಿದ್ಯಾರ್ಥಿಗಳು ಪಾಸಾಗಿ ಶೇ.78.50ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಅದೇ ರೀತಿ ಕೂಡ್ಲಿಗಿ ತಾಲೂಕಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 4741 ವಿದ್ಯಾರ್ಥಿಗಳ ಪೈಕಿ 3471 ವಿದ್ಯಾರ್ಥಿಗಳು ಪಾಸಾಗಿ ಶೇ.73.21ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಅದೇ ರೀತಿ ಹರಪನಹಳ್ಳಿ ತಾಲೂಕಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 4168 ವಿದ್ಯಾರ್ಥಿಗಳ ಪೈಕಿ 2673 ವಿದ್ಯಾರ್ಥಿಗಳು ಪಾಸಾಗಿ ಶೇ.64.13ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಅದೇ ರೀತಿ ಹೂವಿನಹಡಗಲಿ ತಾಲೂಕಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 2959 ವಿದ್ಯಾರ್ಥಿಗಳ ಪೈಕಿ 1810 ವಿದ್ಯಾರ್ಥಿಗಳು ಪಾಸಾಗಿ ಶೇ.61.16ರಷ್ಟು ಫಲಿತಾಂಶ ದಾಖಲಿಸಿದ್ದಾರೆ. ಅದೇ ರೀತಿ ಹೊಸಪೇಟೆ ತಾಲೂಕಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 5937 ವಿದ್ಯಾರ್ಥಿಗಳ ಪೈಕಿ 3365 ವಿದ್ಯಾರ್ಥಿಗಳು ಪಾಸಾಗಿ ಶೇ.56.67ರಷ್ಟು ಫಲಿತಾಂಶ ದಾಖಲಿಸಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ವಿಜಯನಗರ ಜಿಲ್ಲೆಯಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 20,619 ವಿದ್ಯಾರ್ಥಿಗಳ ಪೈಕಿ 13,528 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, 7091 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

19 ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ: ವಿಜಯನಗರ ಜಿಲ್ಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶವು ಒಟ್ಟಾರೆ ಶೇ.65.60 ಆಗಿದ್ದು, 10 ವಿದ್ಯಾರ್ಥಿಗಳು 600ಕ್ಕಿಂತ ಮೇಲ್ಪಟ್ಟು ಅಂಕಗಳನ್ನು ಗಿಟ್ಟಿಸಿ ಟಾಪ್ ಟೆನ್ ಸಾಧಕರಾಗಿ ಹೊರಹೊಮ್ಮಿದ್ದಾರೆ. ಅದೇ ರೀತಿ ಜಿಲ್ಲೆಯ 19 ಶಾಲೆಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿ ಸಾಧನೆ ತೋರಿವೆ. ಎರಡು ಶಾಲೆಗಳಲ್ಲಿ ಶೂನ್ಯ ಫಲಿತಾಂಶ ದಾಖಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

> **ವಿಜಯನಗರ ಜಿಲ್ಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಶೇ.78.50, ಕೂಡ್ಲಿಗಿ ಶೇ.73.12, ಹರಪನಹಳ್ಳಿ ಶೇ.64.13, ಹೂವಿನಹಡಗಲಿ ಶೇ.61.67, ಹೊಸಪೇಟೆ ಶೇ.56.67 ಫಲಿತಾಂಶ ಪಡೆದಿವೆ. 19 ಶಾಲೆಗಳು ಶೇ.100 ಫಲಿತಾಂಶ ಸಾಧಿಸಿದ್ದು, ಹಗರಿಬೊಮ್ಮನಹಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ಹೈಸ್ಕೂಲ್ ಮತ್ತು ಹರಪನಹಳ್ಳಿ ಗೌಸಿಯ ಉರ್ದು ಹೈಸ್ಕೂಲ್ ಶೂನ್ಯ ಫಲಿತಾಂಶ ಪಡೆದಿವೆ.**
>
> **ಯುವರಾಜ ನಾಯ್ಕ, ಉಪನಿರ್ದೇಶಕ ವಿಜಯನಗರ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ.**

# ಜಿಲ್ಲೆಗೆ ಪ್ರಥಮ ಆದಿತ್ಯ ಎಂ.ಎಸ್

## ತಂದೆ ತಾಯಿ ಗುರುಗಳ ಮಾರ್ಗದರ್ಶನ ಮತ್ತು ಕಠಿಣ ಅಭ್ಯಾಸದ ಫಲವೆ ಫಲಿತಾಂಶ

■ **ಹಂಪಿ ಟೈಮ್ಸ್ ಕೊಟ್ಟೂರು**



ಪಟ್ಟಣದ ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ ಪ್ರಕಟಣೆಯಲ್ಲಿ ವಿದ್ಯಾರ್ಥಿ ಆದಿತ್ಯ ಎಸ್.ಎಂ 625 ಕ್ಕೆ 621 ಅಂಕಗಳನ್ನು ಪಡೆದು ವಿಜಯನಗರ ಜಿಲ್ಲೆಗೆ ಪ್ರಥಮ ಸ್ಥಾನದ ಕೀರ್ತಿಗೆ ಪಾತ್ರರಾಗಿದ್ದಾರೆ.

ವಿದ್ಯಾರ್ಥಿ ಆದಿತ್ಯ ಪತ್ರಿಕೆಯೊಂದಿಗೆ ಮಾತನಾಡಿ, ಓದುವಲ್ಲಿ ಶ್ರದ್ಧೆ ಹಾಗೂ ನಿರಂತರ ಪರಿಶ್ರಮದ ಫಲವಾಗಿ ಎಸ್ ಎಸ್ ಎಲ್ ಸಿ ಯಲ್ಲಿ 625 ಕ್ಕೆ 621 ಅಂಕಗಳನ್ನು ಪಡೆದಿರುವ ಇದು ನನಗೆ ಹೆಮ್ಮೆ ಎನ್ನಿಸುತ್ತದೆ. ನೀಟ್ ಪರೀಕ್ಷೆಯ ಫಲಿತಾಂಶದ ನಂತರ ಮುಂದಿನ ವಿದ್ಯಾಭ್ಯಾಸ ಬಗ್ಗೆ ನಿರ್ಧರಿಸುವೆ ಎಂದ ಅವರು, ಈ ರೀತಿ ಉತ್ತರ ಅಂಕಗಳನ್ನು ಪಡೆಯಲು ಕಾರಣ ನನ್ನ ತಂದೆ ಶಿಕ್ಷಕರು ಎಸ್.ಎಂ ಕೊಟ್ರುಸ್ವಾಮಿ, ತಾಯಿ ರೂಪ ಅವರ ಪ್ರೋತ್ಸಾಹ ಹಾಗೂ ಶಿಕ್ಷಕರ ಉತ್ತಮ ಭೋದನೆ ಮತ್ತು ಮಾರ್ಗದರ್ಶನ ದಿಂದ ನಾನು ಇಷ್ಟೊಂದು ಅಂಕ ಪಡೆಯಲು ಸಾಧ್ಯವಾಯಿತು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಾರಂಭದಲ್ಲಿ ಸುಮಾರು 7 ತಾಸು ನಿತ್ಯ ಅಧ್ಯಯನ ಮಾಡುತ್ತಿದ್ದೆ, ಅಂದಿನ ಪಾಠಗಳನ್ನು ಅಂದೇ ಓದಿ ಮುಗಿಸುತ್ತಿದ್ದೆ, ಜೊತೆಗೆ ಮೂರು ದಿನಕ್ಕೊಮ್ಮೆ ಮತ್ತೆ ಆ ಪಾಠಗಳನ್ನು ಪುನರಾವರ್ತನೆ ಮಾಡುವಂತಹದ್ದು ನನ್ನ ಅಭ್ಯಾಸ ಆಗಿತ್ತು. ಆದರೆ ಪರೀಕ್ಷೆ ಸಮೀಪದ ದಿನಗಳಲ್ಲಿ ಮಾತ್ರ 3 ರಿಂದ 4. ತಾಸು ಓದಿ, ಮಾನಸಿಕ ಒತ್ತಡ ಕಡಿಮೆ ಮಾಡಿಕೊಂಡು ಉತ್ತಮ ಅಂಕಗಳನ್ನು ಪಡೆದಿರುವೆ ಎಂದರು. ಆದಿತ್ಯನ ಉತ್ತಮ ಸಾಧನೆಗೆ ಶಿಕ್ಷಕರು ಹಾಗೂ ಪೋಷಕರು, ಸ್ನೇಹಿತರು ಹರ್ಷವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು.

# ಮಳೆಗೆ ನೆಲಕಚ್ಚಿದ ಕಬ್ಬು ಬಾಳೆ ಬೆಳೆ

■ **ಹಂಪಿ ಟೈಮ್ಸ್ ಹೊಸಪೇಟೆ:**

ಬಿಸಿಲಿನ ತಾಪಮಾನಕ್ಕೆ ತತ್ತರಿಸಿದ್ದ ಜನತೆಗೆ ಬುಧವಾರ ರಾತ್ರಿ ಹಂಪಿ ಸುತ್ತಮುತ್ತ ಬಿರುಗಾಳಿ ಸಮೇತ ಸುರಿದ ಮಳೆ ತಣ್ಣಗೆನಿಸಿದರೂ, ರೈತರ ಬೆಳೆದಿದ್ದ ಬಾಳೆ, ಕಬ್ಬು ಬೆಳೆಗಲು ನೆಲಕಚ್ಚಿದ್ದು ಅಪಾರ ನಷ್ಟಕ್ಕೀಡಾಗಿದ್ದಾರೆ.

ತಾಲೂಕಿನ ವೆಂಕಟಾಪುರ, ವೆಂಕಟಾಪುರ ಮಾಗಾಣಿ, ನಿಂಬಾಪುರ, ಬುಕ್ಕಸಾಗರ ಮಾಗಾಣಿ ಪ್ರದೇಶದಲ್ಲಿ ಬೆಳೆದಿದ್ದ ಸುಗಂಧಿ ಏಲಕ್ಕಿ ಸಕ್ಕರೆ ಬಾಳೆ ಬೆಳೆ ರೈತರ ಕೈಸೇರದೆ ಮಣ್ಣುಪಾಲಾಗಿದೆ. ಶಾಸಕ ಎಚ್.ಆರ್.ಗವಿಯಪ್ಪ ಅಧಿಕಾರಿಗಳೊಂದಿಗೆ ಬೆಳೆ ನಷ್ಟ ಗದ್ದೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದರು. ಬೆಳೆ ಹಾನಿ ಪರಿಶೀಲಿಸಿ ಸೂಕ್ತ ಪರಿಹಾರ ಒದಗಿಸುವ ಕುರಿತು ಜಿಲ್ಲಾಡಳಿತ ಭರವಸೆ ನೀಡಿದೆ. ತಹಶೀಲದ್ದಾರ್ ಎಂ.ಎಂ.ಶ್ರುತಿ, ಕೃಷಿ ಅಧಿಕಾರಿಗಳು ಇದ್ದರು.











# ಲಿಖಿತ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರ ಬದಲು: ಡಯಟ್ ಪ್ರಾಂಶುಪಾಲ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮೇ 14 ರಿಂದ 16 ರವರೆಗೆ 2023–24ನೇ ಸಾಲಿನ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು, ತತ್ಸಮಾನ ವೃಂದದ ಹುದ್ದೆಗಳಿಗೆ ನಡೆಯುವ ಲಿಖಿತ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರವು ಬದಲಾಗಿದೆ ಎಂದು ಡಯಟ್‌ನ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ತಿಳಿಸಿದ್ದಾರೆ.

ಪರೀಕ್ಷೆಯ ಪ್ರವೇಶ ಪತ್ರದಲ್ಲಿ ಪರೀಕ್ಷಾ ಕೇಂದ್ರ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ಬಳ್ಳಾರಿ ಎಂದು ನಮೂದಾಗಿದ್ದು, ತಾಂತ್ರಿಕ ತೊಂದರೆಯಿಂದ ಬದಲಾಗಿ ಸೇಂಟ್ ಜೋಸೆಫ್ ಬಾಲಕಿಯರ ಪ್ರೌಢ ಶಾಲೆ, ಬೆಳಗಲ್ ಕ್ರಾಸ್ ಬಳ್ಳಾರಿ, ಈ ಪರೀಕ್ಷಾ ಕೇಂದ್ರದಲ್ಲಿ ಮೇ 14 ರಿಂದ 16 ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 05 ರ ವರೆಗೆ ಲಿಖಿತ ಪರೀಕ್ಷೆಗಳು ನಡೆಯಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೋಜಬಡ್ ಶಾಲೆಯ ವಿದ್ಯಾರ್ಥಿ ಎಚ್. ಅಬ್ದುಲ್ ಎಸ್ಸೆಸ್ಸೆಲ್ಸಿಯಲ್ಲಿ ತಾಲೂಕಿಗೆ ಪ್ರಥಮ



■ **ಹಂಪಿ ಟೈಮ್ಸ್ ಹೊಸಪೇಟೆ:**

ನಗರದ ಟಿಎಂಎಇ ಸಂಸ್ಥೆಯ ರೋಜಬಡ್ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ಕುಮಾರ್ ಅಬ್ದುಲ್ ಎಚ್. 625 ಅಂಕಗಳಿಗೆ 611 ಅಂಕಗಳನ್ನು ಪಡೆದು ಶೇ 97.78 ಪ್ರತಿಶತದೊಂದಿಗೆ ಹೊಸಪೇಟೆ ತಾಲ್ಲೂಕಿಗೆ ಪ್ರಥಮ ಸ್ಥಾನ ಗಳಿಸಿ, ಶಾಲೆಯ ಕೀರ್ತಿ ಹೆಚ್ಚಿಸಿ, ತಾಲ್ಲೂಕಿಗೆ ಹೆಮ್ಮೆಯ ವಿದಾರ್ಥಿಯಾಗಿದ್ದಾನೆ. ಅಭೂತಪೂರ್ವ ಯಶಸ್ಸು ಸಾಧಿಸಿದ ವಿದ್ಯಾರ್ಥಿ ಅಬ್ದುಲ್ಲ ಎಚ್ ಅವರಿಗೆ ಹೊಸಪೇಟೆ ತಾಲ್ಲೂಕು ಶಿಕ್ಷಣಾಧಿಕಾರಿ ಎಂ.ಚನ್ನಬಸಪ್ಪ, ಶಿಕ್ಷಣ ಇಲಾಖೆಯ ಶಿವರಾಮಪ್ಪ, ಮಲ್ಲೇಶಪ್ಪ, ಶಾಲೆಯ ಮುಖ್ಯೋಪಾಧ್ಯಾಯ ಜಿ.ಎಸ್. ಕಾಡಪ್ಪ, ಸಂಸ್ಥೆಯ ಆಡಳಿತಾಧಿಕಾರಿ ಎಚ್. ನಾಗೇಶಪ್ಪ, ಶಾಲೆಯ ಶಿಕ್ಷಕಿ ರಾಜೇಶ್ವರಿ, ವಿಶ್ವನಾಥ ಎಸ್.ಡಿ ಮುಂತಾದವರು ಸನ್ಮಾನಿಸಿ, ಗೌರವಿಸಿದರು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಯ ತಂದೆ ತಾಯಿಗಳು ಉಪಸ್ಥಿತರಿದ್ದರು. ಸಾಧನೆ ಮೆರೆದ ವಿದ್ಯಾರ್ಥಿಯನ್ನು ಶಾಲೆಯ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಮೇ12 ಶಂಕರಾಚಾರ್ಯ ಜಯಂತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮೇ.12 ರಂದು ನಗರದ ಸಾಂಸ್ಕೃತಿಕ ಸಮುಚ್ಚಯ ಆವರಣದ ಹೊಂಗಿರಣ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ಶಂಕರಾಚಾರ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ನೆರವೇರಿಸುವುದರ ಮೂಲಕ ಸರಳವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ. ಲೋಕಸಭಾ ಚುನಾವಣೆ 2024ರ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನಲೆಯಲ್ಲಿ ಶಂಕರಾಚಾರ್ಯರ ಜಯಂತಿಯನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುತ್ತದೆ ಎಂದು ಅವರು ತಿಳಿಸಿದ್ದಾರೆ

# ಎಂ.ಎಂ.ಹಳ್ಳಿಯಲ್ಲಿ ನಾಳೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ:**

ಚಿಲಕನಹಟ್ಟಿ, ಪೊತಲಕಟ್ಟೆ , ತಿಮ್ಮಲಾಪುರ, ಹಾರವನಹಳ್ಳಿ, ತಾಳೆಬಸಪುರತಾಂಡ ಹಾಗು ಇತರೆ ಗ್ರಾಮಗಳನೊಳಗೊಂಡ 66/11ಕೆವಿ ವಿದ್ಯುತ್ ಚಿಲಕನಹಟ್ಟಿ ಉಪವಿತರಣಾ ಕೇಂದ್ರದಲ್ಲಿ ಮೇ 11 ರಂದು 66/11ಕೆವಿ ಚಿಲಕನಹಟ್ಟಿಯಲ್ಲಿ 1 ನೇ ತ್ರೈಮಾಸಿಕ ನಿರ್ವಹಣ ಕಾರ್ಯ ಇರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದ್ದು ಗ್ರಾಹಕರು ಸಹಕರಿಸಬೇಕೆಂದು ಮರಿಯಮ್ಮನಹಳ್ಳಿ ಶಾಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಕ್ಷೇಪಣೆ ಸಲ್ಲಿಸಲು ಅವಕಾಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ದಿಮೆಗಳಿಗೆ ಪ್ರತಿ ವರ್ಷ ಉದ್ದಿಮೆ ಪರವಾನಿಗೆಯನ್ನು ಪಡೆಯಲು 2024–25 ನೇ ಸಾಲಿಗೆ ಪರಿಷ್ಕೃತ ದರಗಳನ್ನು ನಿಗದಿಪಡಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ 15 ದಿನಗಳೊಳಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಲ್ಲಿಸಬಹುದು ಎಂದು ಕಂಪ್ಲಿ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ. ದರಗಳಿಗೆ ಆಕ್ಷೇಪಣೆಗಳು ಹಾಗೂ ಸಲಹೆ ಸೂಚನೆಗಳನ್ನು ಪಡೆಯಲು https://erajyapatra.karnataka.gov.in/WriteReadData/2024/7185.pdf ಕರ್ನಾಟಕ ರಾಜ್ಯ ಪತ್ರದಲ್ಲಿ ಕರಡು ಅಧಿಸೂಚನೆ ಪ್ರಕಟಿಸಲಾಗಿದೆ. ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ದರಗಳನ್ನು ಅಂತಿಮಗೊಳಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ 11 ರಂದು ಬಳ್ಳಾರಿ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2 ಮೇಲೆ ಇರುವ ಫೀಡರ್‌ಗಳ ತುರ್ತು ನಿರ್ವಹಣಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಮೇ 11 ರಂದು ಬೆಳಿಗ್ಗೆ 06 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಎಫ್–40 ಮತ್ತು ಎಫ್–76 ವ್ಯಾಪ್ತಿಯಲ್ಲಿನ ಕುವೆಂಪು ನಗರ, ರಾಮಾಂಜಿನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿ, ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ರೇಷ್ಮೆ ಇಲಾಖೆ, ಟೀಚರ್ಸ್ ಕಾಲೋನಿ, ಈದ್ಗ ಮೈದಾನ ಹಾಗೂ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಇ.ಟಿ.ಲಕ್ಷ್ಮೀ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA